School Leadership

TESS India

# Transforming teaching-learning process: leading teachers' professional development

## ಬೋಧನಾ-ಕಲಿಕಾ ಪ್ರಕ್ರಿಯೆನ್ನು ಪರಿವರ್ತಿಸುವುದು:ನಿಮ್ಮ ಶಾಲೆಯಲ್ಲಿ ಮೌಲ್ಯಮಾಪನದ ನೇತೃತ್ವವಹಿಸುವುದು





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ (Open Educational Resource-OER)** ಶಾಲೆಯಲ್ಲಿ ಭೋದನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್–ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು (National School leadership Curriculum Framework-India)** ಗುರುತಿಸಿರುವ ಶಾಲಾ ನಾಯಕತ್ವದ ಯಥಾರ್ಥದರ್ಶನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಭೋದನೆ–ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)– ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಭೋದನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ ಗುರುತು **ಟೆಸ್–ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಭೋದನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಪೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್–ಇಂಡಿಯಾ (Teacher Education through School based Support) ಯೋಜನೆಯ** ಬಗ್ಗೆ

ವಿದ್ಯಾರ್ಥಿ–ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್–ಇಂಡಿಯಾ**ದ ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾರುವ **105 ಟೆಸ್–ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್–ಇಂಡಿಯಾ** ರೂಪುಗೊಂಡಿದೆ.

*Version 2.0 SL08v1*
*Karnataka*

*Except for third party materials and othe errw wise stated, this content is made available unde err a Creative Commons Attribution-ShareAlike licence: http://creaat tivecommons.org/licenses/by-sa/3.0/*

*TESS-India is led by The Open University UK and funded by UK aid from the UK government*

# ಈ ಘಟಕದ ಬಗ್ಗೆ

ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು :– ವೃತ್ತಿಪರ ಹಾಗೂ ಮಾನವೀಯ ಶಿಕ್ಷಕರನ್ನು ತಯಾರಿಸುವ ಉದ್ದೇಶದಿಂದ NCFTE (National Council for Teacher Education, 2009) (ರಾಷ್ಟ್ರೀಯ ಸಮಿತಿ ಶಿಕ್ಷಕರ ಶಿಕ್ಷಣ 2009) ಯು ವೃತ್ತಿಪರ ಉದ್ಯೋಗಿಗಳ ಅಭಿವೃದ್ಧಿಗೆ ಪ್ರಾಮುಖ್ಯತೆಯನ್ನು ನೀಡಿದೆ. ವೃತ್ತಿಪರ ಅಭಿವೃದ್ಧಿ ಎಂಬುವುದು ನಿರಂತರ ಮತ್ತು ವೃತ್ತಿಪರತೆ ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಅಂಶ. ಕ್ಷೇತ್ರ ಮತ್ತು ಸಮೂಹ ಸಂಪನ್ಮೂಲ ಕೇಂದ್ರಗಳ ಮೂಲಕ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ( DPEP ) ಮತ್ತು ಸರ್ವ ಶಿಕ್ಷಣ ಅಭಿಯಾನ(ಎಸ್.ಎಸ್.ಎ)ವು ವೃತ್ತಿಪರ ಬೆಳವಣಿಗೆಗೆ ಅನೇಕ ಅವಕಾಶಗಳನ್ನು ನೀಡಿದೆ.ಅಲ್ಲದೆ ಇದರೊಡನೆ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಇನ್ ಎಜುಕೇಷನ್ ( IASEs ) ,ಶಿಕ್ಷಕರ ಶಿಕ್ಷಣ ಕಾಲೇಜು ( CTEs ), SCERT ಮೊದಲಾದವು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮತ್ತು ಕೆಲವು ಸರ್ಕಾರೇತರ ಸಂಸ್ಥೆಗಳು ಶಿಕ್ಷಕರಿಗೆ ಸೇವಾನಿರತ ತರಬೇತಿಗಳನ್ನು ಹಮ್ಮಿಕೊಳ್ಳುತ್ತಾರೆ. ಅಭಿವೃದ್ಧಿಯು ಸೇವಾ ನಿರತ ತರಬೇತಿಯಿಂದ ಮಾತ್ರವಲ್ಲ ,ಅವರು ನಡೆಸುವ ಕಾರ್ಯಗಾರಗಳು, ಸಮೂಹ ಸಂಪನ್ಮೂಲ ಕೇಂದ್ರದಲ್ಲಿ ನಡೆಯುವ ಸಭೆಗಳು, ಕಾರಿಡಾರ್ ಸಂಭಾಷಣೆಗಳು,, ಸಮಾನ ಮನಸ್ಕರ ತರಬೇತಿ , ಗುಂಪು ಕಲಿಕಾ ಚಟುಟಿಕೆಗಳು ಮೊದಲಾದವುಗಳಿಂದಲೂ ಉಂಟಾಗುತ್ತವೆ.

ಒಂದು ಶಾಲೆಯ ನಾಯಕನ ನಾಯಕತ್ವವು ಶಿಕ್ಷಕರಿಗೆ ಬೆಂಬಲ ನೀಡುವುದರೊಂದಿಗೆ ಅವರ ಅಭ್ಯಾಸಗಳನ್ನು ಸುಧಾರಿಸಿ ಸಕ್ರಿಯಗೊಳಿಸುವುದು ಒಳಗೊಂಡಿದೆ. (ಶಿಕ್ಷಕರ ವೃತ್ತಿಪರ ಅಭಿವೃದ್ಧಿಯ ಮುನ್ನಡೆಯೂ ಸೇರಿ). ಇವು ನಿಮ್ಮ ನಿಯಂತ್ರಣಕ್ಕೆ ಒಳಪಡಿಸಲು ಆಗದ ಕೆಲವು ನಿರ್ಬಂಧಗಳಿಂದಾಗಿ (ಬಜೆಟ್ ಸೇರಿದಂತೆ) ಸಲೀಸಾಗಿ ನಿರ್ವಹಿಸಲು ಅಸಾಧ್ಯ. ಆದಾಗ್ಯೂ ಶಾಲಾ ಆಧಾರಿತ ಬೆಂಬಲ ಕಾರ್ಯತಂತ್ರದ ಮೂಲಕ ಶಿಕ್ಷಕರ ಪರಿಣಾಮಕಾರತ್ವವನ್ನು ಗರಿಷ್ಠಮಟ್ಟದ ತಲುಪಿಸುವುದು ಈ ಘಟಕದ ಕೇಂದ್ರೀಕೃತ ಅಂಶ.

## ಕಲಿಕಾ ಡೈರಿ

ಈ ಘಟಕದಲ್ಲಿ ಕೆಲಸ ನಿರ್ವಹಿಸುವಾಗ ನಿಮ್ಮ ಕಲಿಕಾ ಡೈರಿಯಲ್ಲಿ ಟಿಪ್ಪಣಿ ಬರೆಯಲು ಕೇಳಲಾಗುತ್ತದೆ. ನೀವು ಈಗಾಗಲೇ ಆರಂಭಿಸದಿದ್ದರೆ, ಒಂದು ಪುಸ್ತಕ ಅಥವಾ ಪೋಲ್ಡರ್‌ನಲ್ಲಿ ನಿಮ್ಮ ಅಲೋಚನೆ ಮತ್ತು ಯೋಜನೆಗಳನ್ನು ಒಂದೇ ಕಡೆ ಕಲೆ ಹಾಕಿ. ಈ ಘಟಕದಲ್ಲಿ ನೀವು ಒಬ್ಬರೇ ಕೆಲಸ ನಿರ್ವಹಿಸಬಹುದು. ಆದರೆ ಮತ್ತೊಂದು ಶಾಲೆಯ ನಾಯಕನೊಡನೆ ಚರ್ಚಿಸುವುದರಿಂದ ನಿಮ್ಮ ಕಲಿಕೆ ಹೆಚ್ಚಾಗುತ್ತದೆ. ಇದು ಈಗಾಗಲೇ ಸಹಯೋಗ ಹೊಂದಿರುವ ನಿಮ್ಮ ಸಹದ್ಯೋಗಿಯಾಗಿರಬಹುದು ಅಥವಾ ಹೊಸ ವ್ಯಕ್ತಿಯೂ ಆಗಿರಬಹುದು. ಚಟುವಟಿಕೆಗಳು ಸಂಘಟಿತ ಅಥವಾ ಹೆಚ್ಚು ಅನೌಪಚಾರಿಕವಾಗಿರಬಹುದು. ಕಲಿಕಾ ಡೈರಿಯಲ್ಲಿರುವ ನಿಮ್ಮ ಟಿಪ್ಪಣಿಯು ಸಹಾಯವಾಗುತ್ತದೆ. ಅಲ್ಲದೆ ನಿಮ್ಮ ಕಲಿಕೆ ಮತ್ತು ಅಭಿವೃದ್ಧಿಯ ಮ್ಯಾಪಿಂಗ್ ಮಾಡಲೂ ಉಪಯುಕ್ತ.

# ಶಾಲಾ ನಾಯಕರು ಈ ಘಟಕದಲ್ಲಿ ಕಲಿಯುವ ಅಂಶಗಳು:

- ಶಿಕ್ಷಕರ ವೃತ್ತಿಪರ ಅಭಿವೃದ್ಧಿಯು ಶಾಲಾ ಸುಧಾರಣೆ ಮತ್ತು ವಿದ್ಯಾರ್ಥಿಗಳ ಕಲಿಕಾ ಫಲಿತಾಂಶದ ಮೇಲೆ ಬೀರುವ ಪ್ರಭಾವ ಹೇಗಿದೆ.
- ತಮ್ಮ ವೃತ್ತಿಪರ ಅಭಿವೃದ್ಧಿಗೆ ಅಗತತ್ಯೆಗಳನ್ನು ಅಂದಾಜು ಮಾಡಲು ನಿಮ್ಮ ಶಿಕ್ಷಕರಿಗೆ ಕೆಲವು ವಿಚಾರಗಳ ಸಹಕಾರ.
- ಯೋಜನೆ, ಮೇಲ್ವಿಚಾರಣೆ ಮತ್ತು ಎಲ್ಲಾ ಶಿಕ್ಷಕರ ವೃತ್ತಿಪರ ಬೆಳವಣಿಗೆಯನ್ನು ಸಕ್ರಿಯಗೊಳಿಸಲು.

# 1 ಶಿಕ್ಷಕ ಅಭಿವೃದ್ಧಿಯ ಯಥಾ ಚಿತ್ರಣ

ಬೋಧನೆಯು ಬದಲಾವಣೆ ಬಯಸದ ವೃತ್ತಿ ಅಲ್ಲ. ಆದರೆ ತಂತ್ರಜ್ಞಾನದ ಪ್ರಭಾವ, ಜ್ಞಾನದ ಸ್ಪೋಟ, ಜಾಗತಿಕ ಆರ್ಥಿಕತೆ ಹಾಗೂ ಸಾಮಾಜಿಕ ಒತ್ತಡಗಳು ಬದಲಾವಣೆಯನ್ನು ಮಾಡುತ್ತದೆ. ಅಂದರೆ ಈ ಬದಲಾವಣೆಗಳನ್ನು ಪರಿಹರಿಸಲು ನಿರಂತರವಾಗಿ ಬೋಧನಾಮಾರ್ಗಗಳು ಹಾಗೂ ಕೌಶಲಗಳಿಗೆ ಹೊಳಪು ನೀಡುವ ಅಗತ್ಯವಿದೆ ಎಂದು ಅರ್ಥ. ಬದಲಿಸುವ ಸಾಮರ್ಥ್ಯವನ್ನು ಹೊಂದುವುದು ಶಿಕ್ಷಕರಿಗೆ ಅಗತ್ಯ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು( NCF , 2005) ರ ಬೋಧಕ ವೃತ್ತಿಯ ಕಾಣ್ಕೆಯನ್ನು ತರಗತಿಯಲ್ಲಿರುವ ಶಿಕ್ಷಕರಿಗೆ ಮನದಟ್ಟು ಮಾಡುವ ಸಲುವಾಗಿ ,ಶಿಕ್ಷಕರ ವೃತ್ತಿಪರ ಬೇಳವಣಿಗೆಯಾಗುವಂತೆ ಮಾಡುವ ಮಹತ್ತರ ಜವಾಬ್ದಾರಿ ಶಾಲಾ ನಾಯಕನ ಮೇಲಿದೆ.

ಪ್ರಮುಖ ಕ್ಷೇತ್ರ 3–ರಾಷ್ಟ್ರೀಯ ಕಾರ್ಯಕ್ರಮ ವಿನ್ಯಾಸ ಮತ್ತು ಪಠ್ಯಕ್ರಮ ಚೌಕಟ್ಟು (2014) ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಶಿಶು ಕೇಂದ್ರಿತ ಪರಿವರ್ತಿಸಲು ಕೇಂದ್ರೀಕರಿಸಿ ಶಾಲಾ ನಾಯಕನ ಸಾಮರ್ಥವನ್ನು ಬೆಳೆಸಿ ಸೃಜನಶೀಲತೆಯನ್ನುಂಟುಮಾಡುತ್ತದೆ. ಹೀಗೆ ಶಾಲಾ ನಾಯಕನಿಗೆ ಯೋಜಿಸುವ, ಮೇಲ್ವಿಚಾರಣೆ ಮಾಡುವ ಮತ್ತು ಪ್ರತಿ ಶಿಕ್ಷಕರಲ್ಲಿ ನಿರಂತರ ವೃತ್ತಿಪರ ಬೆಳವಣಿಗೆ ಹೊಂದುವಂತೆ ಮಾಡುವ ನಿರ್ಣಾಯಕ ಪಾತ್ರವನ್ನು ಹೊಂದಿರುತ್ತಾರೆ.

ಕ್ರಿಸ್ಟೋಫರ್ ಡೇ(1999)ರ ವಾದದಂತೆ ಶಿಕ್ಷಕರ ವೃತ್ತಿಪರ ಬೆಳವಣಿಗೆಯನ್ನು ಜೀವಮಾನದುದ್ದಕ್ಕೂ ಇರುವ ಚಟುವಟಿಕೆ. ಇದು ಅವರ ವೈಯಕ್ತಿಕ ಹಾಗೂ ವೃತ್ತಿ ಜೀವನದ ಮೇಲೆ ಮತ್ತು ಕೆಲಸ ನಿರ್ವಹಿಸುವ ಸ್ಥಳದ ನಿಯಮ ಹಾಗೂ ಸಾಮಾಜಿಕ ಸಂದರ್ಭದ ಮೇಲೆ ಕೇಂದ್ರೀಕರಿಸುತ್ತದೆ.



ಶಿಕ್ಷಕರು ಅಭಿವೃದ್ಧಿಯ ಅಗತ್ಯತೆಯ ಬಗ್ಗೆ ಚರ್ಚೆ.

ವಿದ್ಯಾರ್ಥಿ ಯಾವಾಗಲೂ ತನ್ನನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಶಿಕ್ಷಕರೂ ಯಾವಾಗಲೂ ಕಲಿಯುತ್ತಾರೆ ಎಂಬುವುದನ್ನು ಶಾಲಾ ನಾಯಕ ಪ್ರಮುಖವಾಗಿ ಪರಿಗಣಿಸಬೇಕು. ಗಳಿಸಬೇಕಾದ ಜ್ಞಾನ ಮತ್ತು ಕೌಶಲ್ಯಗಳಿಗೆ ಅಂತ್ಯವೆಂಬುವುದಿಲ್ಲ.. ವೃತ್ತಿಪರ ಅಭಿವೃದ್ಧಿಯು ಸಾಮಾನ್ಯವಾಗಿ ಕೇಂದ್ರೀಕೃತ ಶಿಕ್ಷಣದಲ್ಲಿರುತ್ತದೆ. ಶಾಲಾ ಮಟ್ಟದ ವೃತ್ತಿಪರ ಅಭಿವೃದ್ಧಿಯು ಅನೇಕ ಅನುಕೂಲಗಳನ್ನು ಹೊಂದಿದೆ ಮತ್ತು ಶಿಕ್ಷಕರಿಗೆ ತಮ್ಮ ವೃತ್ತಿಪರ ಅಡೆತಡೆಗಳನ್ನು ನಿವಾರಿಸಿಕೊಳ್ಳಲು ಸಹಕಾರಿಯಾಗುವುದು. ಉದಾಹರಣೆಗೆ:

- ಪ್ರತಿ ಶಿಕ್ಷಕನ ವೃತ್ತಿಪರ ಅಭಿವೃದ್ಧಿಯ ಅಗತ್ಯತೆಗಳನ್ನು ಪ್ರಸ್ಥಾಪಿಸುವುದು.
- ಶಾಲೆಯ ನಿರ್ದಿಷ್ಟ ಅಗತ್ಯ ಮತ್ತು ಲಕ್ಷಣಗಳನ್ನು ಪ್ರಸ್ಥಾಪಿಸುವುದು.
- ಶಾಲೆಯ ಅಭಿವೃದ್ಧಿಯ ಕಡೆ ನಿರ್ದಿಷ್ಟವಾಗಿ ಕೇಂದ್ರೀಕರಿಸುವುದು.
- ಗುಂಪಿನಲ್ಲಿ ಕೆಲಸ ನಿರ್ವಹಿಸುವುದರಿಂದ ಸುಲಭವಾಗಿ ಶಿಕ್ಷಕರಲ್ಲಿ ಸಾಮರ್ಥ್ಯ ಬೆಳವಣಿಗೆ ಮತ್ತು ಕೌಶಲ್ಯ ಗಳಿಸುವಂತೆ ಮಾಡುವುದು.
- ಶಿಕ್ಷಕರು ತಮ್ಮ ಬೋಧನಾ ವೇಳಾಪಟ್ಟಿಗಳಿಗೆ ಹೆಚ್ಚು ತೊಡಕಾಗದಂತೆ ತಮ್ಮ ಬೋಧನೆಯಲ್ಲಿ ವೃತ್ತಿಪರ ಅಭಿವೃದ್ಧಿಯನ್ನು ಅಳವಡಿಸಿಕೊಳ್ಳಬಹುದು.
- ವಿದ್ಯಾರ್ಥಿಗಳ ಕಲಿಕೆಗೆ ತಕ್ಷಣವೇ ಹಿಮ್ಮಾಹಿತಿಯನ್ನು ನೀಡುವ ಸಾಧ್ಯತೆಯಿಂದಲೂ ತರಗತಿಯಲ್ಲಿ ವೃತ್ತಿಪರ ಅಭಿವೃದ್ಧಿಗೊಳಿಸಬಹುದು.
- ಶಾಲಾ ನಾಯಕನಿಗೆ ಗುಣಾತ್ಮಕತೆಯ ಮೇಲೆ ನಿಯಂತ್ರಣ ಹಾಗೂ ವೃತ್ತಿಪರ ಅಭಿವೃದಿಯ ಬಗ್ಗೆ ಕೇಂದ್ರೀಕರಿಸುವುದು.

ಈ ಘಟಕವು ಶಾಲಾ ಆಧಾರಿತ ಚಟುವಟಿಕೆಯ ಮೂಲಕ ಸೇವಾನಿರತ ಶಿಕ್ಷಕರ ಅಭಿವೃದ್ಧಿಗೆ ಕೇಂದ್ರೀಕರಿಸಲಾಗಿದ್ದು ಅದು ಪರಿಣಾಮಕಾರಿ ಕಲಿಕೆ ಮತ್ತು ಬೋಧನೆ ಹಾಗೂ ವ್ಯಾಪಕ ಶಾಲಾ ಸುಧಾರಣೆ ಹೊಂದುವಂತೆ ಮಾಡುವುದು..

ಮುಂದಿನ ಚಟುವಟಿಕೆಯು NCFTE(2009)ರ ಮಾರ್ಗದರ್ಶನದಂತೆ ಬೋಧನಾ ಅಭ್ಯಾಸದಲ್ಲಿ ಅಳವಡಿಸಿಕೊಳ್ಳಬೇಕಾದ ಬದಲಾವಣೆಗಳನ್ನು ಯೋಜಿಸಿ ಗುರುತ್ತಿಸಿ , ವೃತ್ತಿಪರ ಅಭಿವೃದ್ಧಿ ಶಿಕ್ಷಣ ಅಥವಾ ಶಾಲಾ ವೃತ್ತಿಪರ ಅಭಿವೃದ್ಧಿಯಲ್ಲಿ ಆಯ್ಕೆಗೆ ಸಹಾಯ ಮಾಡುವ ಗುರಿಯನ್ನು ಹೊಂದಿದೆ.

## ಚಟುವಟಿಕೆ 1: NCFTE (2009) ಪುನರಾವಲೋಕನ

ಅಧ್ಯಾಯ 3 ಪಠ್ಯಕ್ರಮದ ನಿರ್ವಹಣೆ ಮತ್ತು ಅಭಿವೃದ್ಧಿ ಹೊಂದುತ್ತಿರುವ ಶಿಕ್ಷಕರ ಮೌಲ್ಯಮಾಪನ NCFTE (2009)

ಶಿಕ್ಷಕ ಶಿಕ್ಷಣದಲ್ಲಿ ಪ್ರಸ್ತುತ ಅಭ್ಯಾಸಗಳನ್ನು ಗುರುತ್ತಿಸಿ ಮತ್ತು ಇವು ಹೇಗೆ ಪ್ರಕ್ರಿಯೆ ಆಧಾರಿತವಾಗಿದೆ. NCFTE ಯಲ್ಲಿ ಗುತ್ತಿಸಲಾಗ ಕೆಲವು ಗುಣಲಕ್ಷಣಗಳನ್ನು ನೋಡೋಣ . ಅವುಗಳನ್ನು ಕೆಳಗಿನ ಚಿತ್ರ 2ರಲ್ಲಿ ವಿವರಿಸಲಾಗಿದೆ. ನಿಮಗೆ ನಿಮ್ಮ ಶಾಲೆಯು ಶಿಕ್ಷಕರ ಅಭಿವೃದ್ಧಿಗೆ ಹೆಚ್ಚಾಗಿ ಕಾರ್ಯನಿರ್ವಹಿಸುತ್ತಿದೆ ಎಣಿಸಿದರೆ ಅದನ್ನು ಅನಂತ ಸಾಲು (ನೇರ ಗೆರೆ)ಯಿಂದ ಸೂಚಿಸಿ. ಇದು ಹೆಚ್ಚಾಗಿ ಎಡ ಅಥವಾ ಹೆಚ್ಚಾಗಿ ಬಲದಲ್ಲಿದೆಯೇ? ಈ ಚಟುವಟಿಕೆಯನ್ನು ಮಾಡುವಾಗ ಶಿಕ್ಷಕರನ್ನು ಕಲಿಕಾರ್ಥಿಯಾಗಿ ಬಿಂಬಿಸಲು ನೆನಪಿಡಿ, ವಿದ್ಯಾರ್ಥಿಯಾಗಿ ಅಲ್ಲ.

| | |
|---|---|
| ತರಗತಿ ಕೊಠಡಿಯಲ್ಲಿ “ಕೊಡುವುದು” ಎಂಬ | ಅನುಭವದ ಆಧಾರ, ಅವಲೋಕನ, ಮತ್ತು ಸೈದ್ಧಾಂತಿಕ ಸೈದ್ಧಾಂತಿಕವನ್ನು ಅಳವಡಿಸಲಾಗಿದೆವಾಗಿ ತೊಡಗಿಸಿಕೊಳ್ಳುವುದರಿಂದ ಕಲ್ಪನಾ ಜ್ಞಾನ |

| | |
|---|---|
| | ಉಂಟಾಗುತ್ತದೆ |
| ಜ್ಞಾನವನ್ನು ಬಾಹ್ಯವೆಂದು ಪರಿಗಣಿಸಲಾಗಿದೆ | ಜ್ಞಾನವು ಬೋಧನೆ, ಕಲಿಕೆ ವೈಯಕ್ತಿಕ ಮತ್ತು ಸಾಮಾಜಿಕ ಮತ್ತು ಒಂದಷ್ಟು ಗಳಿಸಲೇ ಬೇಕು. ಅನುಭವದ ಹಂಚಿಕೆಯ ಸಂದರ್ಭದಲ್ಲಿ ನಿರ್ಣಾಯಕ ವಿಚಾರಣೆಯಿಂದ ಹೊರಬರುತ್ತದೆ. |
| ಕಲಿಕಾರ್ಥಿಗಳು ಯೋಜನೆಗಳಲ್ಲಿ, ಪರೀಕ್ಷೆಗಳಲ್ಲಿ, ಕ್ಷೇತ್ರದಲ್ಲಿ ಕೆಲಸ, ಮತ್ತು ಅಭ್ಯಾಸ ಬೋಧನೆ ಕಲಿಕಾರ್ಥಿಯ ವೀಕ್ಷಣೆ, ಸಂವಾದ, ಯೋಜನೆಗಳಲ್ಲಿ | ಕಲಿಕಾರ್ಥಿಯನ್ನು ತಂಡದಲ್ಲಿ ಕೆಲಸ ನಿರ್ವಹಿಸಲು ಒಬ್ಬನೇ ಕೆಲಸ ನಿರ್ವಹಿಸುವನು. ಪ್ರೋತ್ಸಾಹಿಸುವುದು. ತರಗತಿ ಕೊಠಡಿ ಮತ್ತು ಯೋಜನೆಗಳ ವೀಕಣೆ ಸಂವಾದ, ಯೋಜನೆಗಳಲ್ಲಿ ಗುಂಪಿ ನಿರ್ವಹಿಸುವುದು. |
| ಕಲಿಕಾರ್ಥಿಗಳಿಗೆ ಕಲಿಕಾ ಪ್ರಕ್ರಿಯೆಯಲ್ಲಿ ಸಾಮಾಜಿಕ ವಾಸ್ತವಿಕತೆಯನ್ನು ಕಲ್ಪಿಸಿ ಹೇಳುವ 'ಅವಕಾಶ'ವಿರುವುದಿಲ್ಲ. | ಕಲಿಕಾರ್ಥಿಯು ಸಮಾಜದಲ್ಲಿ ತನ್ನ ಸ್ವಸ್ಥಾನವನ್ನು ಪರೀಕ್ಷಿಸಿಕೊಳ್ಳಲು ಹಾಗೂ ಅವರ ಕಲ್ಪನೆಗಳನ್ನು ತರಗತಿಯ ಪ್ರವಚನದಲ್ಲಿ ಒಂದು ಭಾಗವಾಗಿ ಹೇಳಿಕೊಳ್ಳಲು "ಅವಕಾಶ"ವನ್ನು ಕಲ್ಪಿಸುವುದು. |
| ಕಲಿಕಾರ್ಥಿಯ ವಿಷಯ ಜ್ಞಾನದ ಬಗ್ಗೆ ಇರುವ ಪರಿಕಲ್ಪನೆಯನ್ನು ಪರೀಕ್ಷಿಸಲು'ಅವಕಾಶ'ವಿರುವುದಿಲ್ಲ. | ಪುರ್ನರ್ಭೇಟಿ, ಪರೀಕ್ಷೆ, ಮತ್ತು ಜ್ಞಾನದ ಪರಿಕಲ್ಪನೆಗಳ ಸವಾಲುಗಳನ್ನು ಎದುರಿಸಲು ರಚನಾತ್ಮಕ 'ಅವಕಾಶ'ಗಳನ್ನು ನೀಡುವುದು. |

ಚಿತ್ರ 2 NCFTE characteristics on a continuum

**ಚರ್ಚೆ:–**

ಈ ಚಟುವಟಿಕೆ 'ಪ್ರತಿಫಲಿತ ಅಭ್ಯಾಸ ಹಾಗೂ ಶಿಕ್ಷಕ ಶಿಕ್ಷಣ ಕೇಂದ್ರ ಗುರಿ'ಯ ಬಗ್ಗೆ NCFTE(2009) ಪ್ರತಿಪಾದಿಸಿದ ಹಾಗೂ ಬೆಳಕು ಚೆಲ್ಲಿದ ಅಂಶಗಳಲ್ಲಿ ನಿಮ್ಮ ಶಾಲೆಯು ಎಷ್ಟನ್ನು ಅಳವಡಿಸಿಕೊಂಡಿದೆ ಎಂಬುವುದರ ಬಗ್ಗೆ ಚಿಂತಿಸಲು ಸಹಾಯಮಾಡುವ ಗುರಿಯನ್ನು ಹೊಂದಿದೆ. ಮತ್ತು ಶಿಕ್ಷಕನ ಅಭ್ಯಾಸಗಳು ಶೈಕ್ಷಣಿಕ ಜ್ಞಾನದ ಮೇಲೆ ನಿರಂತರ ರೂಪಾಂತರವಾಗುವಂತೆ ಮಾಡಿ ವೈವಿಧ್ಯಮಯ ಸಂದರ್ಭದಲ್ಲಿ ವೈವಿಧ್ಯಮಯ ಅಗತ್ಯಗಳನ್ನು ಹೊಂದುವಂತೆ ಮಾಡುತ್ತದೆ. ಸಕ್ರೀಯ ಕಲಿಕೆಯನ್ನು ಗುರುತ್ತಿಸಲು ತಾತ್ವಿಕವಾಗಿ ನೀವು ಗುರುತ್ತಿಸುವ ಗೆರೆಗಳು ಎಡಭಾಗದಲ್ಲಿ ಪೂರ್ಣಗೊಳ್ಳಬೇಕು. ಆದರೆ ನಿಜವಾಗಿಯೂ ನೀವು ಹಾಕುವ ಗೆರೆ ಬಲ ಅಥವಾ ಮಧ್ಯದಲ್ಲಿರಬಹುದು. ಇದು ನಿಮಗೆ ಯಾವ ದಿಕ್ಕಿಗೆ ಚಲಿಸಬೇಕು ಎಂಬುವುದನ್ನು ತಿಳಿಸುತ್ತದೆ. (ಚರ್ಚಿಸಿ).

ಶಾಲಾ ನಾಯಕನ್ನಾಗಿ ಶಾಲಾ ಸುಧಾರಣೆಯ ಜವಾಬ್ದಾರಿ ನಿಮ್ಮ ಮೇಲಿದ್ದು ಅದರಿಂದ ವಿದ್ಯಾರ್ಥಿ ಕಲಿಕಾ ಫಲಿತಾಂಶ ಮತ್ತು ಸಿಬ್ಬಂಧಿಗಳ ಬೆಳವಣಿಗೆ ಉಂಟಾಗುತ್ತದೆ. ನಿಮ್ಮ ಶಿಕ್ಷಕರು ತಮ್ಮ ದೈನಂದಿನ ಅನುಭವಗಳನ್ನು ಶಿಕ್ಷಕರ ಜ್ಞಾನದ ಅಭಿವೃದ್ಧಿಗಾಗಿ ಮಾರ್ಪಡಿಸಲು ಅವರ ಜ್ಞಾನ ಮತ್ತು ಕೌಶಲಗಳನ್ನು ತೆರೆದ ಮನಸ್ಸಿನಿಂದ ಹಂಚಿಕೊಳ್ಳಲು ಪ್ರೋತ್ಸಾಹಿಸಬೇಕು ಅಲ್ಲದೆ ಅವರನ್ನು ಪರಸ್ಪರ ವೀಕ್ಷಿಸಲು ಮತ್ತು ಜೊತೆಯಲ್ಲಿ ಪಠ್ಯಕ್ರಮದ ವಿಷಯಗಳನ್ನು ಚರ್ಚಿಸಲು ಅವಕಾಶ ನೀಡಬೇಕು.(ಕೃಷಿ, ಉದ್ಯೋಗ ಮನೆ , ಸಮುದಾಯ ಮತ್ತು ಮಾಧ್ಯಮ).

ಶಿಕ್ಷಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಬೇಕಾದ ಸೂಕ್ತ ಸುರಕ್ಷಿತ ಅವಕಾಶವನ್ನು ಸುಗಮಗೊಳಿಸುವ ಜವಾಬ್ದಾರಿ ಒಂದು ಶಾಲಾ ನಾಯಕನಿಗೆ ಇದೆ. ಅಲ್ಲಿ ಪ್ರಯೋಗಗಳಿಗೆ ಪ್ರೋತ್ಸಾಹ ಹಾಗೂ ಕಲ್ಪನೆಗಳಿಗೆ ಮೌಲ್ಯವಿರುತ್ತದೆ.

# 2. ಶಿಕ್ಷಕರ ವೃತ್ತಿಪರ ಕಲಿಕೆ ಮತ್ತು ಅಭಿವೃದ್ಧಿ

ವೃತ್ತಿಪರ ಕಲಿಕೆ ಮತ್ತು ಅಭಿವೃದ್ಧಿ ಎಂಬುವುದು ಒಬ್ಬ ವ್ಯಕ್ತಿಯು ತನ್ನ ಕೆಲಸ ಅಥವಾ ಅಭ್ಯಾಸದ ಬಗ್ಗೆ ತಿಳುವಳಿಕೆ ಮತ್ತು ಕೌಶಲಗಳನ್ನು ಪಡೆಯಲು ಅಥವಾ ತಮ್ಮ ವೃತ್ತಿಪರ ಕ್ಷೇತ್ರದಲ್ಲಿ ಮಾಹಿತಿಯನ್ನು ಪಡೆದುಕೊಳ್ಳುವುದು ಎಂದು ಅರ್ಥ.

ಶಿಕ್ಷಕರ ಶಿಕ್ಷಣ ರಾಷ್ಟ್ರೀಯ ಸಮಿತಿ ( NCFTE , 2009, ಪುಟಗಳು 64-5 ) ಪ್ರಕಾರ ವೃತ್ತಿಪರ ಕಲಿಕೆ ಮತ್ತು ಅಭಿವೃದ್ಧಿಯ ಗುರಿಗಳು.

- ತನ್ನ ಸ್ವಂತ ಅಭ್ಯಾಸಗಳನ್ನು ಅನ್ವೇಷಿಸುವುದು, ಪ್ರತಿಫಲಿಸುವುದು ಮತ್ತು ಅಭಿವೃದ್ಧಿಗೊಳಿಸುವುದು.
- ತನ್ನ ಸ್ವಂತ ಅಭ್ಯಾಸಗಳನ್ನು ಅನ್ವೇಷಿಸುವುದು, ಪ್ರತಿಫಲಿಸುವುದು ಮತ್ತು ಅಭಿವೃದ್ಧಿಗೊಳಿಸುವುದು.

- ತನ್ನ ಜ್ಞಾನವನ್ನು ಮತ್ತಷ್ಟು ದೃಢಗೊಳಿಸುವುದು, ಶೈಕ್ಷಣಿಕ ಅಂಶ ಹಾಗೂ ಶಾಲಾ ಪಠ್ಯಕ್ರಮವನ್ನು ಸಮರ್ಪಕ ಮಾಡುವುದು
- ಕಲಿಕಾರ್ಥಿಗಳ ಮತ್ತು ಅವರ ಶಿಕ್ಷಣದ ಬಗ್ಗೆ ಪ್ರತಿಬಿಂಬಿ ಮತ್ತು ಸಂಶೋಧನೆ.
- ಶೈಕ್ಷಣಿಕ ಮತ್ತು ಸಾಮಾಜಿಕ ಗಳನ್ನು ಅರ್ಥೈಸಿಕೊಳ್ಳುವುದು ಮತ್ತು ಸಮರ್ಪಕ ಮಾಡುವುದು
- ಶಿಕ್ಷಕರ ಶಿಕ್ಷಣ , ಪಠ್ಯಕ್ರಮ ಅಭಿವೃದ್ಧಿ,ಅಥವಾ ಆಪ್ತ ಸಮಾಲೋಚನೆಯಂತಹ ಶಿಕ್ಷಣದ ವಿಷಯಗಳಿಗೆ ಇತರರ ಪಾತ್ರಗಳನ್ನು ಸಜ್ಜುಗೊಳಿಸುವುದು.
- ಶಿಕ್ಷಕರು ಮತ್ತು ನಿರ್ದಿಷ್ಟ ವಿಷಯಗಳಲ್ಲಿ ಕೆಲಸ ನಿರ್ವಹಿಸುವವರು ಹಾಗೂ ಸಮಾಜದ ಬುದ್ದಿ ಜೀವಿಗಳು ಬೌದ್ಧಿಕ ಏಕಾಂಗಿತನವನ್ನು ಭೇದಿಸಿ, ಅನುಭವಗಳ ಹಂಚಿಕೆ ಮತ್ತು ಕ್ಷೇತ್ರದಲ್ಲಿ ಇತರರೊಡನೆ ಶೈಕ್ಷಣಿಕ ಒಳನೋಟಗಳ ಹಂಚಿಕೆ ಕಾರ್ಯ ನಡೆಯಬೇಕು.

SCERT ಯು ಶಿಕ್ಷಕರಿಗೆ ವೃತ್ತಿಪರ ಕಲಿಕೆ ಮತ್ತು ಅಭಿವೃದ್ಧಿ ಮಾಹಿತಿಯನ್ನು ನೀಡಲು DIETನೊಡನೆ ಕೆಲಸ ನಿರ್ವಹಿಸುತ್ತದೆ. ಇದು ಸಾಮಾನ್ಯವಾಗಿ ವೈಯಕ್ತಿಕ ಗಮನ ನೀಡಲು ಸಾಧ್ಯವಾಗುವಂತೆ ವಿಶೇಷವಾಗಿ ಆಯೋಜಿಸಿರುವ ಕಾರ್ಯಗಾರಗಳಲ್ಲಿ ನಡೆಯುತ್ತದೆ. ಸಾಮಾನ್ಯ ಸಮಸ್ಯೆಗಳನ್ನು ಕೈಗೆತ್ತಿ ಕೊಳ್ಳುವುದರಿಂದ ತರಬೇತಿಯಲ್ಲಿ ಸಮಸ್ಯೆಗಳ ಉದ್ಭವ ಮತ್ತು ಆಗ್ಗಾಗೆ ಮಾಹಿತಿಗಳನ್ನು ತಿಳಿಸುವ ಹೊಸ ನೀತಿ ಉಪಕ್ರಮಗಳು ಮತ್ತು ಹಸ್ತಕ್ಷೇಪಗಳಿರುತ್ತದೆ.

ನಿಮ್ಮ ಶಿಕ್ಷಕರಿಗೆ ಅಗತ್ಯವಿರುವ ಕೌಶಲ್ಯದ ಮಟ್ಟ ಮತ್ತು ಅಭಿವೃದ್ಧಿ ಬದಲಾಗಿತ್ತದೆ. ಅವರ ವಿಭಿನ್ನ ಪ್ರೇರಣೆಗಳು ಮತ್ತು ನಡವಳಿಕೆಗಳು ನೀವು ಸಾಗುತ್ತಿರುವ ದಾರಿಯಲ್ಲಿ ಬರಲು ಅವರನ್ನು ಆಕರ್ಷಿಸಲು ವಿವಿಧ ವಿಧಾನಗಳನ್ನು ಬಳಸುವ ಅಗತ್ಯವಿದೆ ಎಂಬುವುದನ್ನು ತೋರಿಸುತ್ತದೆ. ಉದಾಹರಣೆಗೆ ಶ್ರೀಮತಿ. ಗುಪ್ತಾ ಇವರಿಗೆ ವೃತ್ತಿಪರ ಕಲಿಕೆ ಮತ್ತು ಅಭಿವೃದ್ಧಿಯ ಅಗತ್ಯವಿದ್ದರೂ ತಮ್ಮನ್ನು ತೊಡಗಿಸಿಕೊಳ್ಳಲು ಇಷ್ಟಪಡಲಿಲ್ಲ. ಶ್ರೀಮತಿ. ಗುಪ್ತಾ ಇವರು ನಿಮಗೆ ಇಂತಹ ಯಾವುದಾದರೊಬ್ಬ ವ್ಯಕ್ತಿಯನ್ನು ನೆನಪಿಗೆ ತರಬಹುದು. ಈ ವ್ಯಕ್ತಿ ಅಧ್ಯಯನವನ್ನು ಚಟುವಟಿಕೆ 3ರಲ್ಲೂ ಬಳಸಬಹುದು.

## ವ್ಯಕ್ತಿ ಅಧ್ಯಯನ 2: ಶ್ರೀಮತಿ. ಗುಪ್ತಾರ ಬೋಧನೆ.

ಶ್ರೀಮತಿ. ಗುಪ್ತಾ ಇವರು ಅದೇ ಪ್ರಾಥಮಿಕ ಶಾಲೆಯಲ್ಲಿ 16 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರು ಮನೆಯಿಂದ ತಂದ ಕಾಗದ, ವಿಶೇಷ ಬಾಕ್ಸ್‌ನಲ್ಲಿ ಕತ್ತರಿ, ಅಂಟು, ಕೊರೆಯಚ್ಚುಗಳು, ಡ್ರಾಯಿಂಗ್ ಪಿನ್‌ಗಳನ್ನು ಬಳಸಿ ತಯಾರಿಸಿದ ಪ್ರದರ್ಶನಗಳನ್ನು ಹೆಮ್ಮೆಯಿಂದ ಪ್ರದರ್ಶಿಸುತ್ತಿದ್ದರು. ಇಬ್ಬರು ಸಮರ್ಥ ಬಾಲಕಿಯರ ಸಹಕಾರದಿಂದ ಅತ್ಯುತ್ತಮ ಪ್ರದರ್ಶನವನ್ನು ಸಂಘಟಿಸಿದ್ದರು. ಪೋಷಕರು ಮತ್ತು ಶಾಲೆಗೆ ಬೇಟಿ ನೀಡಿದವರು ತಮ್ಮ ಅನಿಸಿಕೆಯನ್ನು ತಿಳಿಸುತ್ತಿದ್ದರು. ಶಿಕ್ಷಕಿಯು ಮೆಚ್ಚುಗೆಯನ್ನು ಹೆಮ್ಮೆಯಿಂದ ಸ್ವೀಕರಿಸುತ್ತಿದ್ದರು.
ಸಾಮಾನ್ಯವಾಗಿ ಶ್ರೀಮತಿ. ಗುಪ್ತಾ ಕೆಲಸಮಾಡಲು ಇಷ್ಟಪಡುತ್ತಿದ್ದರು. ಆದರೆ ವಿಜ್ಞಾನ ಪಠ್ಯಪುಸ್ತಕದಲ್ಲಿರುವ ಕೆಲವು ಅಧ್ಯಾಯಗಳನ್ನು ಆಕೆ ಬೋಧಿಸಲು ಇಷ್ಟ ಪಡುತ್ತಿರಲಿಲ್ಲ. ಏಕೆಂದರೆ ಅದರಲ್ಲಿ ಬರುವ ಸಿದ್ದಾಂತ ಮತ್ತು ವಿಷಯದ ಬಗ್ಗೆ ಖಚಿತತೆ ಇರಲಿಲ್ಲ. ಕೆಲವೊಮ್ಮೆ ಬೋಧನೆಯಲ್ಲಿ ಸ್ವಲ್ಪ ಬೇಸರಿಕೆ ಬರುತ್ತಿತ್ತು ಆದರೆ ಸಾಮಾನ್ಯವಾಗಿ ಅವರು ಬುದ್ಧಿವಂತ ಮಕ್ಕಳೊಡನೆ ಮುಂದಿನ ಸಾಲಿನಲ್ಲಿ ಕುಳಿತುಕೊಳ್ಳುತ್ತಿದ್ದರು. ತನಗೆ ಅಚ್ಚುಮೆಚ್ಚಾದುದನ್ನು ಪಡೆಯಲು ಸಂಕೋಚ ಪಡುತ್ತಿರಲಿಲ್ಲ. ಅವರು ಹಿಂದಿನ ಬೆಂಚ್‌ನಲ್ಲಿ ಕುಳಿತುಕೊಳ್ಳುವ ಅಷ್ಟೇನು ಬುದ್ಧಿವಂತರಲ್ಲದ ವಿದ್ಯಾರ್ಥಿಗಳಿಗೆ ಹೆಚ್ಚು ಗಮನ ನೀಡುತ್ತಿರಲಿಲ್ಲ. ಸುಗ್ಗಿಯ ಸಮಯದಲ್ಲಿ ಹಾಜರಾತಿ ಕಡಿಮೆಯಾದಾಗ ಕೆಲವೇ ವಿದ್ಯಾರ್ಥಿಗಳಿಗೆ ಕಲಿಸುವಾಗ ನಿರಾಳರಾಗುತ್ತಿದ್ದರು.

ಕೆಲವೊಮ್ಮೆ ಶ್ರೀಮತಿ. ಗುಪ್ತಾ ಇವರು ಡಯಟ್‌ನಲ್ಲಿ ನೀಡುವ ತರಬೇತಿ ಕಾರ್ಯಗಾರಗಳಲ್ಲಿ ಭಾಗವಹಿಸುತ್ತಿದ್ದರು. ಸಾಧ್ಯವಾದರೆ ಅದರಿಂದ ತಪ್ಪಿಸಿಕೊಳ್ಳಲು ಬಯಸುತ್ತಿದ್ದರು. ಅವರಿಗೆ ಪ್ರಯಾಣ ಮಾಡುವುದಾಗಲಿ, ಪರಿಚಯವಿಲ್ಲದ ಜನರಿರುವ ಕಡೆ ಹೋಗಲು ಇಷ್ಟಪಡುತ್ತಿರಲಿಲ್ಲ. ವೈಯಕ್ತಿಕ ಮಟ್ಟದಲ್ಲಿ ಆಕೆ ಸಹದ್ಯೋಗಿಗಳಿಗೆ ಬೆಂಬಲ ನೀಡುತ್ತಿದ್ದರು. ಆದರೆ ಬೋಧನಾ ಅಭ್ಯಾಸದ ಬಗ್ಗೆಯಾಗಲೀ ಅಥವಾ ಶಾಲೆಯಭಿವೃದ್ಧಿಯ ಕುರಿತು ವ್ಯಾಪಕ ಚರ್ಚೆಗಳಲ್ಲಿ ತೊಡಗಿಸಿಕೊಳ್ಳುತ್ತಿರಲಿಲ್ಲ. ಅವರು ತನ್ನ ತರಗತಿಗೆ ಬೋಧಿಸಲು ಶಾಲೆಗೆ ಬರುತ್ತಿದ್ದರು ಮತ್ತು ಮನೆಗೆ ಹೋಗಿ ತನ್ನ ಕುಟುಂಬವನ್ನು ನೋಡಿಕೊಳ್ಳುತ್ತಿದ್ದರು. ಬಿಡುವಿನ ಸಮಯದಲ್ಲಿ ನೃತ್ಯವನ್ನು ಮಾಡುತ್ತಿದ್ದಳು. ಬೇರೊಂದು ಶಾಲೆಯಲ್ಲಿ ವಾರಕ್ಕೊಮ್ಮೆ ಖಾಸಾಗಿಯಾಗಿ ನೃತ್ಯ ತರಗತಿಯನ್ನು ನಡೆಸುತ್ತಿದ್ದಾರೆ. ಅಂತಿಮ ವರ್ಷದ ವಿದ್ಯಾರ್ಥಿಗಳಿಂದ ಒಂದು ವರ್ಷ ನೃತ್ಯ ಕಾರ್ಯಕ್ರಮವನ್ನು ಆಯೋಜಿಸಲಾಯಿತು .ಆದರೆ ತಾನೊಬ್ಬಳೇ ಹೆಚ್ಚು ಕೆಲಸ ಮಾಡಿರುವುದೆಂದು ಈಗ ಅವರಿಗೆ ಭಾಸವಾಗುತ್ತಿದೆ.

## ಚಟುವಟಿಕೆ 2: ವೃತ್ತಿಪರ ಅಭಿವೃದ್ಧಿಯ ಬಗ್ಗೆ ಸಂಭಾಷಣೆಮಾಡಲು ಯೋಜನೆ ತಯಾರಿಸುವುದು

ಶಾಲಾ ನಾಯಕನ್ನಾಗಿ ನೀವು ಶ್ರೀಮತಿ. ಗುಪ್ತಾ ಇವರಿಗೆ ವೃತ್ತಿಪರ ಅಭಿವೃದ್ಧಿಯನ್ನು ಪರಿಚಯಿಸುವ ಸಂಭಾಷಣೆಯನ್ನು ಕಲ್ಪಿಸಿಕೊಳ್ಳಿ. ನಿಮಗೆ ಶ್ರೀಮತಿ. ಗುಪ್ತಾ ಇವರನ್ನು ಗೊತ್ತಿಲ್ಲ. ಆದರೆ ಅವರಂತಹ ಇತರ ಶಿಕ್ಷಕರನ್ನು ತಿಳಿದಿರಬಹುದು. ಅವರ ಸಾಮರ್ಥ್ಯದ ಮತ್ತು ಅವರು ಹೇಗೆ ಒಬ್ಬ ಶಿಕ್ಷಕರಾಗಬಹುದು ಎಂಬುವುದರ ಬಗ್ಗೆ ಮಾತನಾಡುವುದನ್ನು ಕಲ್ಪಿಸಿಕೊಳ್ಳಿ. ನಿಮ್ಮ ಕಲಿಕಾ ಡೈರಿಯಲ್ಲಿ ಇವುಗಳನ್ನು ನಮೂದಿಸಿಕೊಳ್ಳಿ.

1 ಅವರ ಅಭಿವೃದ್ಧಿಯ ಅಗತ್ಯತೆಗಳನ್ನು ತಿಳಿಯುವ ಚರ್ಚೆ ಹೇಗೆ ಪ್ರಾರಂಭಿಸಲು ಸಾಧ್ಯವಾಯಿತು?
2 ಅವರ ಯಾವ ಪ್ರಬಲ ಅಂಶಗಳನ್ನು ಮತ್ತು ಯಾವ ದುರ್ಬಲ ಅಂಶಗಳಿಗೆ ಒತ್ತುನೀಡಲು ಸಾಧ್ಯವಾಯಿತು?
3 ಅವರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂದು ಭಾವಿಸುತ್ತೀರಿ?
4 ನೀವು ಧನಾತ್ಮಕ ಫಲಿತಾಂಶವನ್ನು ಪಡೆಯಲು ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು?

ಸಂಪನ್ಮೂಲ 1ರಲ್ಲಿರುವ ಟೆಂಪ್ಲೇಟ್‌ನ್ನು ನೋಡಿ. ಶ್ರೀಮತಿ. ಗುಪ್ತಾ ಇವರಿಗೆ ಸಂಬಂಧಿಸಿದಂತೆ ಯಾವ ರೀತಿಯಲ್ಲಿ ಇದನ್ನು ಬಳಸಿಕೊಳ್ಳಬಹುದು. ಯಾವ ರೀತಿಯ ಸಮಸ್ಯೆಗಳು ಮತ್ತು ಕಲ್ಪನೆಗಳು ಉಂಟಾಗಬಹುದು. ಮತ್ತು ಯಾವ ವಿಭಾಗದಲ್ಲಿ ಹೊರಬಂದ ಅಂಶಗಳನ್ನು ದಾಖಲಿಸುತ್ತಿರಿ.

ಸಂಪನ್ಮೂಲ 2ರ 'ಕಥೆ ಹೇಳುವುದು, ಹಾಡುಗಳು, ಪಾತ್ರ ಪರಿಚಯ ಮತ್ತು ನಾಟಕ" ಇವು ಬೋಧನೆಯಲ್ಲಿ ಬಳಸಬಹುದಾದ ಪರ್ಯಾಯ ವಿಧಾನಗಳು. ಶ್ರೀಮತಿ. ಗುಪ್ತಾರವರು ಸೃಜನಶೀಲತೆ ಇರುವ ಶಿಕ್ಷಕಿ ಎಂಬುವುದರಲ್ಲಿ ಎರಡು ಮಾತಿಲ್ಲ. ಇವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿದರೆ, ವಿದ್ಯಾರ್ಥಿಗಳು ಮತ್ತಷ್ಟು ಹೆಚ್ಚಿನ ಪ್ರಯೋಜನವನ್ನು ಪಡೆಯಬಹುದು. ಮುಕ್ತ ಶೈಕ್ಷಣಿಕ ಸಂಪನ್ಮೂಲದಲ್ಲಿ ಪ್ರಮುಖ ಸಂಪನ್ಮೂಲಗಳ ಬಗ್ಗೆ ವಿವಿಧ ವಿಷಯಗಳಿಗೆ ಕೇಂದ್ರೀಕರಿಸಲಾಗಿದೆ. ಹಾಗೂ PLD ಬಗ್ಗೆ ಚರ್ಚಿಸಲು ಉಪಯುಕ್ತ ಸಾಧನವೂ ಆಗಿದೆ. PLD ಚಟುವಟಿಕೆಗಳಿಗೆ ಯೋಜನೆಯನ್ನು ರೂಪಿಸುವಾಗ ಪುನಃ ಈ ಅಂಶಗಳಿಗೆ ಕೇಂದ್ರೀಕರಿಸುತ್ತೇವೆ.

**ಚರ್ಚೆ:–**

ನಿಮ್ಮ ಶಾಲೆಯಲ್ಲಿ ಈಗಾಗಲೇ ಸಾಮಾನ್ಯ ವಿಮರ್ಶಿಸುವುದು ಅಥವಾ ಅಂದಾಜಿಸುವಿಯ ಮೂಲಕ ವಯಕ್ತಿಕವಾಗಿ ಅಥವಾ ಸಿಬ್ಬಂದಿಗಳೊಡನೆ ವೃತ್ತಿಪರ ಚಟುವಟಿಕೆಗಳು ಮತ್ತು ವೃತ್ತಿಪರ ಬೆಳವಣಿಗೆಯ ಬಗ್ಗೆ ಚರ್ಚಿಸುವುದನ್ನು ನಿಮ್ಮ ಶಾಲೆಯ ಸಂಸ್ಕೃತಿ ಎನ್ನಬಹುದು. ಆದುದರಿಂದ ನಿಮ್ಮ ಶಿಕ್ಷಕರು ಇಂತಹ ಸಂವಾದಗಳಿಗೆ ಒಗ್ಗಿಕೊಂಡಿರಬಹುದು. ಆದಾಗ್ಯೂ ಈ ರೀತಿಯ ಸಂಭಾಷಣೆಯು ಮೊದಲ ಬಾರಿ ನಡೆದಿರುವ ಸಂಭವ ಹೆಚ್ಚಾಗಿದೆ.

ನಿಮ್ಮ ಶಿಕ್ಷಕರ ವೃತ್ತಿಪರ ಜೀವನವನ್ನು ಅರ್ಥೈಸಿಕೊಳ್ಳಲು ನೀವು ಆಯೋಜಿಸಿದ ಸಭೆಯ ವೇಳಾಪಟ್ಟಿಯಲ್ಲಿ ಶಿಕ್ಷಕರು ತಮ್ಮ ಅಗತ್ಯದ ಬೆಂಬಲ, ಆಸಕ್ತಿ ಮತ್ತು ನಿರೀಕ್ಷೆಗಳನ್ನು ಸಿದ್ಧಪಡಿಸಿಕೊಳ್ಳುವುದು ಉತ್ತಮ. ಇದು ಒಂದು ವೃತ್ತಿಪರ ಸಂಭಾಷಣೆಯಾಗಿರಬೇಕು ಭಯವಿಲ್ಲದೆ ಹೇಳಿಕೊಳ್ಳುವಂತಿರುವುದರಿಂದ ನಿಮಗೆ ನಿಮ್ಮ ಶಿಕ್ಷಕರ ವೃತ್ತಿ ಜೀವನದ ಬಗ್ಗೆ ತಿಳಿದುಕೊಳ್ಳಬಹುದು. ಶ್ರೀಮತಿ. ಗುಪ್ತಾ ಇವರಂಥವರನ್ನು ಪುಸಲಾಯಿಸಿ, ಧೈರ್ಯತುಂಬಿ ಸಂವಾದಕ್ಕೆ ಸಿದ್ಧಪಡಿಸಬೇಕು ಆದರೆ ಅವರ ಪ್ರಬಲ ಅಂಶಗಳನ್ನು ಪತ್ತೆ ಹಚ್ಚಿರಬೇಕು. ಅದು ಮಾತನಾಡಲು ಪ್ರಾರಂಭಿಸಲು ಅವಕಾಶ ನೀಡುತ್ತದೆ. ಈ ಆರಂಭಿಕ ಮಾತುಕತೆಗಳು ಮತ್ತು ಅವುಗಳ ದಾಖಲೆ ಭವಿಷ್ಯದ ಬೆಂಬಲಕ್ಕೆ ಆಧಾರವಾಗಿರುತ್ತದೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಯೋಜಿಸಲು ಸಹಾಯಮಾಡುತ್ತದೆ. ಶಿಕ್ಷಕರು ಸಂಭಾಷಿಸಲು ಆರಂಭಿಸಿದರೆಂದರೆ ಅವರು ತಮ್ಮ ವೃತ್ತಿಪರ ಅಭಿವೃದ್ಧಿಯ ಜವಾಬ್ದಾರಿಯನ್ನು ತಾವೇ ತೆಗೆದುಕೊಳ್ಳಲು ಸಿದ್ಧರಾಗಿರುವರು ಎಂದು ತಿಳಿದುಕೊಳ್ಳಬಹುದು. ಸಂಭಾಷಣೆಯು ನೀವು ಮಾಡಿರುವ ಪಾಠ ವೀಕ್ಷಣೆಗೆ ಸಂಬಂಧಿಸಿರಬಹುದು ಅಥವಾ ಕೈಗೊಂಡ ಇತರೆ ಮೇಲ್ವಿಚಾರಣೆ ಪ್ರಕ್ರಿಯೆ ಬಗ್ಗೆ ಇರಬಹುದು. ಆಗ ಆ ಶಾಲೆಯು ಸಮಾನ ಮನಸ್ಕರ ವೀಕಣೆಗೆ ಒಳಪಡುತ್ತದೆ ಮತ್ತು ಸಹದ್ಯೋಗಿಗಳ ಸಾಕ್ಷ್ಯಾಧಾರಿತ ಸಂಭಾಷಣೆಯ ಕೊಡುಗೆಯೊಂದಿಗೆ ಪಾಠ ವೀಕ್ಷಣೆಯು PLD ಆವೃತ್ತದ ಸಾಮಾನ್ಯ ಭಾಗವಾಗುತ್ತದೆ.

# 3. ಶಿಕ್ಷಕರ PLD ಮಾದರಿಗಳು

PLD ಸಾಮಾನ್ಯವಾಗಿ, ರಚಿಸಿ ನಿರ್ವಹಿಸಲಾದರೂ ಅದು ಔಪಚಾರಿಕ ಮತ್ತು ಅನೌಪಚಾರಿಕವಾಗಿ ನಡೆಯುವುದು. ಇವು ಕ್ರಿಯಾ ಸಂಶೋಧನೆ, ಅಭ್ಯಾಸದ ಪ್ರತಿಬಿಂಬ, ಮೆಂಟರಿಂಗ್, ಸಮಾನ ಮನಸ್ಕರ ಮಾರ್ಗದರ್ಶನ ದಂತಹ ವಿಧಾನಗಳು ಪ್ರತ್ಯೇಕವಾಗಿ, ಸಣ್ಣ ಗುಂಪಿನಲ್ಲಿ ಅಥವಾ ದೊಡ್ಡ ಗುಂಪಿನಲ್ಲಿ ಸಂಭವಿಸಬಹುದು. ನಿಮ್ಮ ಶಾಲೆಯಲ್ಲಿ ಉತ್ತಮವಾಗಿ ರೂಪಿಸಿರುವ ತರಬೇತಿಯಂತೆ ಅನೌಪಚಾರಿಕ ಕಲಿಕೆಯನ್ನು ಗುರುತ್ತಿಸಿ ಗೌರವಿಸುತ್ತಿದ್ದಾರೆ ಎಂದರೆ ಸಂಪೂರ್ಣ ಅಭಿವೃದ್ಧಿಯ ಅವಕಾಶಗಳನ್ನು ಬಳಸಲಾಗುತ್ತಿದೆ ಎಂಬುವುದನ್ನು ದೃಢೀಕರಿಸುತ್ತದೆ. ಟಿ ವಿ , ರೇಡಿಯೋ, ಇಂಟರ್ನೆಟ್ ಗಳನ್ನು ಒಳಗೊಂಡ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ(ಐಸಿಟಿ)ಯು ಜ್ಞಾನವನ್ನು ಒದಗಿಸುವ ಮಾರ್ಗ. ಅಥವಾ ಪ್ರಮುಖ ಮತ್ತು ಹೊಸ ಮಾಹಿತಿಯನ್ನು ವ್ಯಾಪಕವಾಗಿ ಪ್ರಸಾರಮಾಡುತ್ತದೆ. ಐಸಿಟಿ ಯು ನಿಮ್ಮ ಶಿಕ್ಷಕರಿಗೆ ಸಂಬಂಧಿಸಿದ ತಜ್ಞರೊಡನೆ ಕೆಲಸ ನಿರ್ವಹಿಸಲು ಮತ್ತು ಮಾಹಿತಿಗಳನ್ನು ಪಡೆಯಲು ಸಹಾಯಮಾಡುತ್ತದೆ. ಇಂಟರ್ನೆಟ್ ನೀವು ಮತ್ತು ನಿಮ್ಮ ಶಿಕ್ಷಕರಿಗೆ ಮುಕ್ತ ಸಂಪನ್ಮೂಲಗಳನ್ನು ಒದಗಿಸುತ್ತದೆ. (TESS-India ಸೇರಿದಂತೆ ಅನೇಕ

OERs,ರೂಪದಲ್ಲಿ ದೊರೆಯುತ್ತದೆ. Central Institute of Educational Technology (CIET) ಸಂಯೋಜಿಸಿದ National Repository of Open Educational Resources (NROER) National Council of Educational Research and Training (NCERT) ಇವು ನಿಮ್ಮ ಶಾಲೆಯ ವೃತ್ತಿಪರ ಅಭಿವೃದ್ಧಿಗೆ ಅಗತ್ಯತೆಗಳನ್ನು ಒದಗಿಸುತ್ತದೆ. ಈ ಘಟಕದ ಕೊನೆಯಲ್ಲಿ ಆನ್‌ಲೈನ್ ಸಂಪನ್ಮೂಲದ ಕೊಂಡಿಗಳನ್ನು ನೀಡಲಾಗಿದೆ. ಬೋಧನೆ ಮತ್ತು ಕಲಿಕೆಗೆ PLD ಚಟುವಟಿಕೆಗಳು ಬೋಧನೆ ಮತ್ತು ಕಲಿಕೆಗೆ ಪ್ರಥಮ ವಾಹಕವಾಗುತ್ತದೆ. ತರಗತಿ ಪ್ರಕ್ರಿಯೆಗಳನ್ನು ಸುಧಾರಿಸಲು ಶಿಕ್ಷಕರಿಗೆ ಸಮಯ ಮತ್ತು ಅವಕಾಶ ನೀಡುವುದು ಮುಖ್ಯವಾಗುತ್ತದೆ. ಅವರು ಎಷ್ಟೇ ಪರಿಣಾಮಕಾರಿ ಶಿಕ್ಷಕರಾಗಿದ್ದರೂ ಚಿಂತೆ ಇಲ್ಲ ಎಲ್ಲಾ ಶಿಕ್ಷಕರು ಇತರರ ಉತ್ತಮ ಆಚರಣೆಗಳನ್ನು ವೀಕ್ಷಿಸುವುದರಿಂದ ಕಲಿಯುತ್ತಾರೆ. ಇವು ಶಾಲೆಯಲ್ಲಿ ಸದಾ ಲಭ್ಯವಿದ್ದರೂ "ಆದೃಶ್ಯ"ವಾಗಿರಬಹುದು ಅಥವಾ ಯಾರನ್ನು ವೀಕ್ಷಿಸಬೇಕು ಅಥವಾ ಯಾವ ಅಭ್ಯಾಸಗಳಿಂದ ಪ್ರಯೋಜನವಿದೆ ಎಂಬುವುದು ಸಿಬ್ಬಂಧಿಗಳಿಗೆ ತಿಳಿಯದೇ ಇರಬಹುದು. ಹೀಗೆ ಅದೃಶ್ಯವಾದ ಉತ್ತಮ ಅಭ್ಯಾಸಗಳನ್ನು ಸಿಬ್ಬಂಧಿ ಸಮುದಾಯಕ್ಕೆ ಕಾಣುವಂತೆ ಮಾಡಿ ಇತರರಿಗೆ ಅಮೂಲ್ಯವಾಗುವಂತೆ ಮಾಡವುದು ನಾಯಕತ್ವದ ಪಾತ್ರ. ಉತ್ತಮ ಅಭ್ಯಾಸಗಳು ಶಾಲೆಯ ಎಲ್ಲಿ ಅಸ್ತಿತ್ವದಲ್ಲಿದೆ ಎಂಬುವುದನ್ನು ತಿಳಿಯುವ ಅಗತ್ಯವಿದೆ ಹಾಗೂ ಅದನ್ನು ಶಿಕ್ಷಕ ಸಮುದಾಯದ ಒಳಿತಿಗೆ ಬಳಸಬೇಕು. ಈ ಪ್ರಕ್ರಿಯೆಯ ಮೊದಲ ಹೆಜ್ಜೆ ಪ್ರತಿ ಶಿಕ್ಷಕ ತಮ್ಮ ಅಭ್ಯಾಸದ ಬಗ್ಗೆ ಪರಿಣಾಮಕಾರಿಯಾಗಿ ಅರಿತಿರಬೇಕು ಮತ್ತು ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳವ ಅಧಿಕಾರ ಪಡೆಯುವಂತೆ ಶಕ್ತನಾಗಬೇಕು. ತರಗತಿಯಲ್ಲಿ ಶಿಕ್ಷಕರು ಅನೇಕ ವಿಧಗಳಲ್ಲಿ ಕಲಿಯುವರು ಇವು ನೆಲೆಗೊಂಡ ಕಲಿಕೆಗೆ ಪುಷ್ಠಿ ನೀಡುತ್ತದೆ. ಅಲ್ಲಿ ಶಿಕ್ಷಕನ ಏನಾದರೊಂದು ಹೊಸ ಪ್ರಯತ್ನವಿರುತ್ತದೆ. ಅಥವಾ ಈಗಾಗಲೇ ಮಾಡಿರುವ ಪ್ರಯೋಗಗಳನ್ನು ಅಳವಡಿಸಿಕೊಳ್ಳುತ್ತಾರೆ. ಶಿಕ್ಷಕರಿಗೆ ತಮ್ಮ ಹೊಸ ಕಲ್ಪನೆಗಳನ್ನು ಪ್ರಯತ್ನಿಸಲು ಸಾಕಷ್ಟು ವಿಶ್ವಾಸವಿರಬೇಕು. ತಪ್ಪುಗಳಾದಾಗ ಅವುಗಳನ್ನು ಒಪ್ಪಿಕೊಳ್ಳುವುದರಿಂದ ಅವರಿಗೆ ಏನಾಗಿದೆಯೋ ಅದರ ಮೇಲೆ ಪ್ರತಿಫಲಿಸಲು ಅವಕಾಶವಿದೆ. ಮತ್ತು ತಪ್ಪಾಗಳು ಕಾರಣವನ್ನು ತಿಳಿಯಬಹುದು, ಆದುದರಿಂದ ಅವರು ಅಭ್ಯಾಸವನ್ನು ಮಾರ್ಪಡಿಸಿಕೊಳ್ಳಬಹುದು. ವಸ್ತು ಸ್ಥಿತಿ ಕಲಿಕೆಯು ನಡೆಯುತ್ತದೆ. ಮತ್ತು ಅನೇಕ ರೀತಿಯಲ್ಲಿ ಬೆಂಬಲಿಸುತ್ತದೆ.

ಪಟ್ಟಿ ಕೆಳಗೆ ಕೊಡಲಾಗಿದೆ.

**ಶಾಲಾ ಹಂತದ PLD ಚಟುವಟಿಕೆಗಳು**

1. ಕ್ರಿಯಾ ಸಂಶೋಧನೆ:– ಶಿಕ್ಷಕ ತನ್ನ ಆಸಕ್ತಿ ಮತ್ತು ಕಾಳಜಿ ಇರುವ ನಿರ್ದಿಷ್ಟ ಕ್ಷೇತ್ರವನ್ನು ಅನ್ವೇಷಿಸಿ ತರಗತಿಯಲ್ಲಿ ಕಲಿಕಾ ಅಭ್ಯಾಸವನ್ನು ಅಭಿವೃದ್ಧಿಗೊಳಿಸಲು, ವಿದ್ಯಾರ್ಥಿಗಳ ಕಲಿಕೆಯ ಪರಿಣಾಮವನ್ನು ಪ್ರತಿಫಲಿಸಲು. ಕ್ರಿಯಾ ಸಂಶೋಧನೆಯು ಆವೃತ್ತಕವಾಗಿರುತ್ತದೆ , ಅಂತಿಮ ಹಂತ ಮುಂದಿನ ಹೊಸ ಕಲ್ಪನೆಯ ಅನ್ವೇಷಣೆಗೆ ಪ್ರಚೋದಿಸುತ್ತದೆ.(ಸಂಪನ್ಮೂಲ 3 ನೋಡಿ)
2. ಸಹಯೋಗದ ಕಲಿಕೆ:– ಹೋಲಿಕೆ, ವಿಭಿನ್ನತೆ, ಅಭ್ಯಾಸಗಳ ಹಂಚಿಕೆ, ಯೋಜನೆಗಳ ಅಭಿವೃದ್ಧಿಗಳ ಮೂಲಕ ಒಬ್ಬ ಶಿಕ್ಷಕ ಇತರ ಶಿಕ್ಷಕರೊಡಗೂಡಿ ಕಲಿಯುವ ಕಲಿಕೆ. ಇದು ಒಂದು ನಿರ್ದಿಷ್ಟ ಮಾಹಿತಿಯ ಅಭ್ಯಾಸ. (ಉ.ದಾ.ಒಂದು ಕಾರ್ಯನಿರತ ಗುಂಪಿನ ತಂಡ ಶಾಲಾ ಮೌಲ್ಯಮಾಪನ ನಿರ್ವಹಿಸುವುದು)
3. ತಂಡ ಬೋಧನೆ:–ಇಲ್ಲಿ ಇಬ್ಬರು ಶಿಕ್ಷಕರು ಒಂದು ಪಾಠವನು ವಿದ್ಯಾರ್ಥಿಗಳಿಗೆ ತಲುಪಿಸಲು ಒಟ್ಟಾಗಿ ಕೆಲಸ ನಿರ್ವಹಿಸುವುದು ಅಥವಾ ತಮ್ಮ ಸಂಯೋಜಿತ ಕೌಶಲಗಳನ್ನು ಬಳಸಿಕೊಂಡು ವೇಗ, ವಿವಿಧ, ವಿದ್ಯಾರ್ಥಿಗಳ ಗಮನ , ನಾವಿನ್ಯ, ಮತ್ತು ಪ್ರದರ್ಶನ ಗಳನ್ನು ಬಳಸಿಕೊಂಡು ಪರಸ್ಪರ ಕಲಿಕೆ ಮತ್ತು ಹೊಸ ಮಾರ್ಗಗಳನ್ನು ಪ್ರಯತ್ನಿಸುವುದು.
4. ಅಭ್ಯಾಸದ ಪ್ರತಿಫಲನ:– ಇದು ಒಬ್ಬೊಬ್ಬರೆ ಮಾಡುವ ಚಟುವಟಿಕೆ. ಆದರೂ ಇತರರೊಡನೆ ಪ್ರತಿಫಲನವನ್ನು ಪ್ರೇರಿಪಿಸಲು ಸಮಾನವಾಗಿ ಹಂಚಿಕೊಳ್ಳಬಹುದು ಮತ್ತು ಸಹೋದ್ಯೋಗಿಗಳಿಗೆ ಅಥವಾ ಗುಂಪಿಗೆ ಪ್ರಶ್ನಿಸುವಂತೆ ಪ್ರೇರೇಪಿಸಬಹುದು. ಪ್ರತಿಫಲನವನ್ನು ಪ್ರೇರಿಪಿಸಲು ಇರುವ ಉತ್ತಮ ಅವಕಾಶವೆಂದರೆ ಸಹೋದ್ಯೋಗಿಗಳು ಚರ್ಚೆಯನ್ನು ಅನುಸರಿಸಿ ಮಾಡುವ ಪಾಠದ ಅವಲೋಕನ.
5. ಶಿಕ್ಷಕರ ಜಾಲದಲ್ಲಿ ಭಾಗವಹಿಸುವಿಕೆ, ಶಾಲಾ ಆಧಾರಿತ ಜಾಲಗಳು , ಶಾಲಾ –ಅವಳಿ ಪಾಲುಗಾರಿಕೆ ಇವು ಶಿಕ್ಷಕರಿಗೆ ತಮ್ಮ ಅನುಭವವನ್ನು ಹಂಚಿಕೊಳ್ಳಲು ಪ್ರೇರೇಪಿಸುವ ಮಾರ್ಗಗಳು, ಅಲ್ಲದೆ ಸಮಸ್ಯೆಗಳ ಚರ್ಚೆ, ಸಮಾನ ಮನಸ್ಕರಿಂದ ವಿಚಾರಗಳಿಗೆ ತೆರೆದುಕೊಳ್ಳುವುದು, ಪ್ರತಿಫಲಿಸುವುದು ಮತ್ತು ಭವಿಷ್ಯಕ್ಕಾಗಿ ಯೋಜಿಸುವುದು . ನಿಮ್ಮ ಶಾಲೆಗೆ ಸಮೀಪದಲ್ಲಿರುವ ಹೊಣೆಗಾರಿಕೆ ಇರುವ ಶಾಲೆಯ ಶಾಲಾ ನಾಯಕನನ್ನು ಅನ್ವೇಷಿಸಬಹುದು. TESS-Indiaದ ವಿಷಯ ಘಟಕವು ಶಿಕ್ಷಕರಿಗೆ ಪ್ರತ್ಯೇಕವಾಗಿ ಅಥವಾ ಒಟ್ಟಾಗಿ ಬೋಧನೆ ಮತ್ತು ವಿದ್ಯಾರ್ಥಿಗಳ ಕಲಿಕೆಯ ಅಂಶಗಳ ಮೇಲೆ ಕೆಲಸ ನಿರ್ವಹಿಸಲು ಅವಕಾಶ ನೀಡುತ್ತದೆ.

TESS-India ಇದರ ಪ್ರಮುಖ ಸಂಪನ್ಮೂಲಗಳು ಅಭಿವೃದ್ಧಿ ಚಟುವಟಿಕೆಗಳಿಗೆ ಪರಿಣಾಮಕಾರಿಯಾದ ಉಲ್ಲೇಖಗಳನ್ನು ಈ ಕೆಳಗಿನ ವಿಷಯಗಳಿಗೆ ನೀಡುತ್ತದೆ.

- ಪ್ರಗತಿ ಮತ್ತು ಕಾರ್ಯಕ್ಷಮತೆ.
- ಹಿಮ್ಮಾಹಿತಿಯ ಮೇಲ್ವಿಚಾರಣೆ.
- ಕಥೆ ಹೇಳುವುದು, ಹಾಡುಗಳು, ರೋಲ್ ಪ್ಲೇ, ಮತ್ತು ನಾಟಕ.
- ಸ್ಥಳೀಯ ಸಂಪನ್ಮೂಲಗಳ ಬಳಕೆ.
- ಜೋಡಿಯಾಗಿ ಕೆಲಸ ನಿರ್ವಹಣೆ
- ಗುಂಪಿನಲ್ಲಿ ಕೆಲಸ ನಿರ್ವಹಣೆ.
- ಪಾಠದ ಯೋಜನೆ ತಯಾರಿ.
- ಪ್ರಶ್ನಿಸುವ ಮೂಲಕ ಯೋಚನೆಯನ್ನು ಪ್ರಚುರ ಪಡಿಸುವುದು.

- ಕಲಿಕೆಗಾಗಿ ಮಾತುಕಥೆ.
- ಎಲ್ಲರನ್ನು ತೊಡಗಿಸಿಕೊಳ್ಳುವುದು.

**ವಿಡಿಯೋ:** ಬೋಧನೆ ಮತ್ತು ಕಲಿಕೆಯಲ್ಲಿ ಶಾಲಾ ನಾಯಕತ್ವ.

ಈ ಕಲಿಕೆಯ ಎಲ್ಲಾ ಉದಾಹರಣೆಗಳಲ್ಲಿ ಶಿಕ್ಷಕ(ಒಬ್ಬನೇ ಅಥವಾ ಸಹೋದ್ಯೋಗಿಗಳೊಡನೆ)ಅಭಿವೃದ್ಧಿಯ ಕ್ಷೇತ್ರಗಳನ್ನು ಗುರುತ್ತಿಸಿರುವುದನ್ನು ಮತ್ತು ನಂತರ ಯೋಜಿಸುವುದರಲ್ಲಿ ಹಾಗೂ ಕಲಿಕೆಯಲ್ಲಿ ಕ್ರೀಯಾಶೀಲರಾಗಿ ತೊಡಗಿಸಿಕೊಂಡಿರುವುದನ್ನು ನೀವು ಗಮನಿಸಿರಬಹುದು. ಇದನ್ನು ಮತ್ತೊಂದು ಮಾತುಗಳಲ್ಲಿ ತಿಳಿಸುವುದಾದರೆ ಇದು ಶಿಕ್ಷಕರಿಗೆ ಏನಾದರೂ ಮಾಡುವುದಲ್ಲ ಆದರೆ ಅವರು ತಮಗೆ ತಾವೇ ಸುಧಾರಿಸಲು ಸದೃಢಗೊಳಿಸುವುದು. ಒಬ್ಬ ನಾಯಕನಾಗಿ ನಿಮಗೆ ಹೊರಹೊಮ್ಮುವ ಅಥವಾ ಅಭಿವೃದ್ಧಿಯ ಅಗತ್ಯಗಳಿಗೆ ಅವಕಾಶವಿಲ್ಲ ಎಂದೂ ಅಲ್ಲ, ಆದರೆ ಇದನ್ನು ಸಹಕಾರ ಮತ್ತು ಸಹಯೋಗದ ಹುಮ್ಮಸ್ಸಿನಿಂದ ಒಗ್ಗೂಡಿ ಆಗುವ ಕಲಿಕೆ. ಒಬ್ಬ ಶಾಲಾ ನಾಯಕನ್ನಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಕಲಿಕೆಯನ್ನು ಸಕ್ರಿಯಗೊಳಿಸುವಿರಿ.

## ಚಟುವಟಿಕೆ 3: ಶಿಕ್ಷಕರ ವೃತ್ತಿಪರ ಅಭವೃದ್ಧಿಗೆ ಚಾಲನೆ

ಶ್ರೀಮತಿ. ಗುಪ್ತಾ ಇವರ ಚಟುವಟಿಕೆ 2ನ್ನು ಪರಿಗಣಿಸಿದಾಗ ಶ್ರೀಮತಿ. ಗುಪ್ತಾ ಇವರು ನಿರ್ವಹಿಸಬಹುದಾದ ಐದು PLD ಚಟುವಟಿಕೆಗಳ ಗುರುತ್ತಿಸುವಿಕೆಗೆ ಐದು ರೀತಿಯ PLD ಕಲಿಕೆಯನ್ನು ಬಳಸಬಹುದು. ಅವರಿಗೆ ಅನ್ವಯಿಸುವ ಸಕ್ರಿಯ ಕಲಿಕೆ, ಅಭ್ಯಾಸಗಳ ಪ್ರತಿಫಲನ, ವೈಯಕ್ತಿಕ ಕಲಿಕೆ ಗುಂಪು ಕಲಿಕೆ ಭಾಗವಾಗಿ ಕಲಿಕೆ, ಮತ್ತು/ಅಥವಾ ಸಮಾನ ಮನಸ್ಕರಿಂದ ಅಥವಾ ಶಾಲಾ ನಾಯಕನಿಂದ ತರಬೇತು ಇವುಗಳ ಬಗ್ಗೆ ಯೋಚಿಸಬೇಕು. ವೃತ್ತಿ ಅಧ್ಯಾಯನಕ್ಕೆ ಮಿತಿಗೊಳಿಸಿದ ಪ್ರಮಾಣದ ಮಾಹಿತಿಗಳಿರ ಬೇಕೆಂದು ನಿರ್ಬಂಧಗಳನ್ನು ಬಯಸಬೇಡಿ. ಅವರು ಅಭಿವೃದ್ಧಿ ಹೊಂದುವಾಗ ಅದನ್ನು ಸೇರಿಸಿಕೊಳ್ಳಬಹುದು. ನೀವು ಈ ಚಟುವಟಿಕೆಯನ್ನು ಆ ವ್ಯಕ್ತಿ ಮತ್ತು ನಿಮ್ಮ ಶಾಲೆಯನ್ನು ಮಾತ್ರ ಮನಸ್ಸಿನಲ್ಲಿಟ್ಟು ಮಾಡಬೇಕು. ನಿಮ್ಮ ಕಲಿಕಾ ಡೈರಿಯಲ್ಲಿ ಇದಕ್ಕೆ ಸರಿ ಹೊಂದುವ ಚಟುವಟಿಕೆಯ ಬಗ್ಗೆ ಟಿಪ್ಪಣಿ ಮಾಡಿಕೊಳ್ಳಿ.

**ಚರ್ಚೆ:–**

ಶ್ರೀಮತಿ. ಗುಪ್ತಾ ಇವರು ಶಾಲೆಯಲ್ಲಿ ತಮ್ಮ ಕೌಶಲ್ಯವನ್ನು ಅಭಿವೃದ್ಧಿಗೊಳಿಸಿಕೊಳ್ಳಲು ಇರುವ ಅವಕಾಶಗಳ ವ್ಯಾಪ್ತಿಯ ಬಗ್ಗೆ ಬಹುಶಃ ಯೋಚಿಸಬೇಕು. ಉದಾಹರಣೆಗೆ ಅವರು ಆತ್ಮ ವಿಶ್ವಾಸ ಹೊಂದಿರುವ ಶಿಕ್ಷಕರು, ಕ್ಲಿಷ್ಟದ ವಿಜ್ಞಾನ ಪಾಠ ಬೋಧಿಸುವರು, ಅಥವಾ ಜ್ಞಾನದ ಕೊರತೆಯನ್ನು ತುಂಬಲು ಬೇರೆ ವಿಜ್ಞಾನ ಶಿಕ್ಷಕರಿಂದ ತರಬೇತುಗೊಳಿಸಬಹುದು ಎಂದು ಸೂಚಿಸಬಹುದು. ಶಾಲೆಯು ಮುಂದಿನ ಅವಧಿಯಲ್ಲಿ ಕ್ಲಿಷ್ಟ ಅಂಶಗಳ( ಅಂಗ ರಚನಾ ಶಾಸ್ತ್ರ, ಸಾಹಿತ್ಯ, ರೇಖಾಗಣಿತ, ಸಂಗೀತ ಮೊದಲಾದವು) ಮೇಲೆ ನೃತ್ಯ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಳ್ಳುವ ಜವಾಬ್ದಾರಿಯನ್ನು ಶ್ರೀಮತಿ. ಗುಪ್ತಾರಿಗೆ ನೀಡಲು ಸೂಚಿಸಬಹುದು. ಇನ್ನೂ ಮುಂದುವರೆದು ಶ್ರೀಮತಿ. ಗುಪ್ತಾರ ಒಂದು ಪಾಠವನ್ನು ವೀಕ್ಷಿಸಿ ,ಕಲಿಕಾ ಅಂಶವನ್ನು ಗುರುತ್ತಿಸಿಕೊಂಡು ನಂತರ ತರಗತಿಯ ಮುಂದಿನ ಮತ್ತು ಹಿಂದಿನ ವಿದ್ಯಾರ್ಥಿಗಳ ಕಲಿಕೆಯನ್ನು ಅವರೊಡನೆ ಚರ್ಚಿಸಲು ತೀರ್ಮಾನಿಸಿರಬಹುದು. ಬಹುಹಂತದ ಕಲಿಕೆಯ ಸವಾಲುಗಳು ಮತ್ತು ಪರಿಹಾರಗಳ ಬಗ್ಗೆ ಸಂವಾದವನ್ನು ಎಲ್ಲಾ ಶಿಕ್ಷಕರಿಗೆ ನಡೆಸಿದರೆ ಅದು ಎಲ್ಲರಿಗೂ ಅಭಿವೃದ್ಧಿಹೊಂದಲು ಅವಕಾಶ ನೀಡಿದಂತಿರುತ್ತದೆ. ಶ್ರೀಮತಿ. ಗುಪ್ತಾರು ತನ್ನ ಬೋಧನಾ ಅಭ್ಯಾಸವನ್ನು ಪುನಶ್ಚೇತನ ಹಾಗೂ ಬಲಪಡಿಸುವುದರಿಂದ ಶಾಲಾ ಗುರಿಯಾದ ವಿದ್ಯಾರ್ಥಿಗಳ ಕಲಿಕೆಯನ್ನು ಮಾಡಿ ಕಲಿ ಅಥವಾ ಸ್ವತಃ ಪರಿಹಾರ ಕಂಡುಹಿಡಿಯುವ ಕ್ರಮದಿಂದ ತನ್ನ ಸಹೋದ್ಯೋಗಿಗಳ ನಡುವೆ ಪರಿಣಾಮಕಾರಿಗೊಳಿಸಬಹುದು.

ಶ್ರೀಮತಿ. ಗುಪ್ತಾರು ಪ್ರದರ್ಶನಗಳನ್ನು ಏರ್ಪಡಿಸುವುದರಲ್ಲಿ ಎತ್ತಿದ ಕೈ. ಇತರ ಶಿಕ್ಷಕರಲ್ಲಿ ಈ ಪ್ರವೃತ್ತಿಯನ್ನು ಬೆಳೆಸುವ ನಿಟ್ಟಿನಲ್ಲಿ ಇವರ ಪಾತ್ರ ಬಳಸಿಕೊಳ್ಳುವುದರ ಬಗ್ಗೆಯೂ ಗಮನಿಸಬೇಕು. ಪ್ರೇರಣೆ ಎಂಬುವುದು ಪ್ರಮುಖ ಅಂಶ . ಆದುದರಿಂದ ಪ್ರಮುಖ ಅಗತ್ಯಗಳನ್ನು ಗುರುತ್ತಿಸುವ ಮತ್ತು ಅವುಗಳಿಗೆ ಯೋಜನೆಗಳನ್ನು ರೂಪಿಸುವ ಕೆಲಸದಲ್ಲಿ ಶ್ರೀಮತಿ. ಗುಪ್ತಾರೊಡಗೂಡಿ ಕೆಲಸ ನಿರ್ವಹಿಸುವುದು ಬಹಳ ಪ್ರಮುಖ. ಅವರ ಸಾಮರ್ಥ್ಯ ಮತ್ತು ಅಗತ್ಯದ ಬಗ್ಗೆ ನಡೆಸುವ ಚರ್ಚೆಯಲ್ಲಿ ಶ್ರೀಮತಿ. ಗುಪ್ತಾರು ಭಾಗವಹಿಸಿ ಅದ್ವತೆ ಮತ್ತು ಅವಕಾಶಗಳನ್ನು ಒಪ್ಪಿಕೊಳ್ಳುವ ಅವಕಾಶಗಳಿದ್ದರೆ ಬಹುಶಃ ಬಹಳ ಉತ್ಸಾಹದಿಂದ ಭಾಗವಹಿಸುತ್ತಾರೆ. ಶ್ರೀಮತಿ. ಗುಪ್ತಾರವರು ಶಾಲೆಯಲ್ಲಿ ತನ್ನದೇ ಸ್ಥಾನವನ್ನು ಹೊಂದಿರುವ ಶಿಕ್ಷಕರಾಗಿದ್ದು , ತನ್ನ PLD ಬಗ್ಗೆ ಅಗತ್ಯವಾದ ಆಸಕ್ತಿ ಇಲ್ಲದಿರಬಹುದಾದುದರಿಂದ ಅವರೊಡನೆ ಕೆಲಸ ನಿರ್ವಹಿಸುವುದು ನಿರ್ದಿಷ್ಟ ಸವಾಲಿನ ಕೆಲಸ. ಆದರೆ ಅವರಲ್ಲಿ ಅಡಗಿರುವ ಸಾಮರ್ಥ್ಯ ಶಾಲೆಯ ಆಸ್ತಿ ಇದ್ದಂತೆ ಅದನ್ನು ಗೌರವಿಸಲೇ ಬೇಕು. ಅವರ PLD ಬಗ್ಗೆ ನಡೆಸುವ ಸಂಭಾಷಣೆಯು ಸಾಮರ್ಥ್ಯ ಕಟ್ಟುವ ಮತು ಅಗತ್ಯತೆಯನ್ನು ತಿಳಿಸುವುದರ ನಡುವೆ ಸಮತೋಲನಗೊಳಿಸಬೇಕು – ಮತ್ತು ಎಲ್ಲಾ ಅಗತ್ಯಗಳನ್ನು ಒಂದೇ ಸಮಯದಲ್ಲಿ ಸರಿಪಡಿಸುವ ಪ್ರಯತ್ನವಾಗಬಾರದು. ನಿಮ್ಮಲ್ಲಿ ಅನೇಕ ಶಿಕ್ಷಕರು ಕಲಿಕೆ ಮತ್ತು ಸುಧಾರಣೆಗೆ ಅವಕಾಶಗಳನ್ನು ಬಯಸುವವರಿದ್ದು ಅವರ PLD ಬಗ್ಗೆ ನಿಮಗೆ ಇರುವ ಆಸಕ್ತಿಯನ್ನು ಸ್ವಾಗತಿಸುತ್ತಾರೆ.

## ಚಟುವಟಿಕೆ 4: Formulate an action plan

ಶಾಲಾ ನಾಯಕನ್ನಾಗಿ ಶ್ರೀಮತಿ. ಗುಪ್ತಾರವರ ಅಗತ್ಯಗಳನ್ನು ಮತ್ತು ಅವರಿಗಿರುವ ಅವಕಾಶಗಳನ್ನು ಗುರುತ್ತಿಸುವ ಕೆಲಸಕ್ಕೆ ಒಂದು ಕ್ರೀಯಾಯೋಜನೆಯನ್ನು ರೂಪಿಸಿ. ಈಗ ನೀವು ನಿಮ್ಮ ಆಸಕ್ತಿಯನ್ನು ನಿಮ್ಮ ಸಹೋದ್ಯೋಗಿಗಳು ಮತ್ತು ಶಾಲೆಯ ಕಡೆ ಹೊರಳಿಸಿ. ತಮ್ಮ PLD ಬಗ್ಗೆ ಕುತೂಹಲ ಹೊಂದಿರುವ ಒಬ್ಬ ಅಥವಾ ಇಬ್ಬರು ಶಿಕ್ಷಕರೊಡನೆ ಕೆಲಸ ನಿರ್ವಹಿಸಿ. ಚಟುವಟಿಕೆ 2ರಲ್ಲಿ ಗುರುತ್ತಿಸಿರುವ ಪ್ರಕ್ರಿಯಾ ವಿಧಾನವನ್ನು ಪ್ರತಿ ಶಿಕ್ಷಕರಿಗೂ ಅಳವಡಿಸಿ.(ಸಂಪನ್ಮೂಲ 1ರಲ್ಲಿ ಬರುವ ಟೆಂಪ್ಲೇಟ್), ಮತ್ತು ಚಟುವಟಿಕೆ 3(ಅವಕಾಶಗಳನ್ನು ಗುರುತ್ತಿಸುವುದು), ನಂತರ ಪ್ರತಿಯೊಬ್ಬರೊಡನೆ ಯೋಜನೆ ರೂಪಿಸಲು ಕೆಲಸ ನಿರ್ವಹಿಸಿ. ಯೋಜನೆಗೆ ಸಂಪನ್ಮೂಲ 4ರಲ್ಲಿ ಬರುವ ಟೆಂಪ್ಲೇಟ್‌ನ್ನು ಬಳಸುವುದು. ಹಲವಾರು ಕ್ರಮಗಳನ್ನು ಅಳವಡಿಸಬೇಡಿ. ಗರಿಷ್ಠ ನಾಲ್ಕು ಅಥವಾ ಐದು ಉತ್ತಮ. ನಿಮ್ಮ ಎಲ್ಲಾ ಇತರೆ ಕೆಲಸಗಳ ಜವಾಬ್ದಾರಿಯ ನಡುವೆ ಇದನ್ನು ಸಂಘಟಿಸಬೇಕಾಗಿರುವುದರಿಂದ ಅವುಗಳನ್ನು ಸಂಕೀರ್ಣಗೊಳಿಸಬೇಡಿ. ಎಂಬುವುದು ನಿರಂತರ ಪ್ರಕ್ರಿಯೆ ಎಂಬುವುದನ್ನು ನೆನಪಿನಲ್ಲಿಡಿ ಮತ್ತು ಅದರಿಂದ ನಿಮ್ಮ ಶಿಕ್ಷಕರು ವರ್ಷದಿಂದ ವರ್ಷಕ್ಕೆ ಏಳಿಗೆಯನ್ನು ಹೊಂದಬೇಕು. ನಿಮ್ಮ ಕಲ್ಪನೆಯನ್ನು ಪರಿಚಯಿಸಲು ಮತ್ತು ಮೊದಲ ಚರ್ಚೆಗೆ ಸ್ವತಃ ಮುಂದೆ ಬರುವಂತೆ ಕೇಳಲು ಸಿಬ್ಬಂಧಿ ಸಭೆಯ ಅಧೀವೇಶನವನ್ನು ನಡೆಸಬಹುದು ಅಥವಾ ಇದನ್ನು ಅನೌಪಚಾರಿಕವಾಗಿಯೂ ಮಾಡಬಹುದು. ಈ ಎರಡೂ ವಿಧಾನದಲ್ಲಿ ನೀವು PLD ವ್ಯವಸ್ಥೆಯನ್ನು ಎಲ್ಲಾ ಶಿಕ್ಷಕರಿಗೆ ಪರಿಚಯಿಸುವುದನ್ನು ಯೋಜಿಸಿಕೊಳ್ಳಬೇಕು. ಇದನ್ನು ಮುಂದೆ ತೆಗೆದುಕೊಂಡು ಹೋಗಲು ಇಬ್ಬರು ಸ್ವಯಂ ಬಂದು ಸಹಾಯ ಮಾಡಬಹುದು. ನಿಮ್ಮ ಶಿಕ್ಷಕರ ಸಾಮರ್ಥ್ಯವನ್ನು ನಿರೂಪಿಸಲು ನೀವು ರೂಪಿಸಿರುವ ಯೋಜನೆಯಲ್ಲಿ ಸವಾಲಿನ ಅಂಶಗಳು ಇರಲೇ ಬೇಕು ಮತ್ತು ಅದು ಅವರನ್ನು ಹೊಸ ನೆಲೆಗೆ ಪರಿಚಯಿಸುತ್ತದೆ. ಆದರೆ ಯೋಜನೆಯು ನಿಗದಿತ ಸಮಯದಲ್ಲಿ ಕೆಲಸ ನಿರ್ವಹಿಸುವಂತಿರಬೇಕು ಮತ್ತು ಕಾರ್ಯ ಸಾಧ್ಯವಾಗಬೇಕು. ಪ್ರತಿ ಗುರಿಯು ಮಕ್ಕಳ ಕಲಿಕಾ ಸುಧಾರಣೆಯ ಪುಷ್ಟಿಗೆ ಎಂಬುವುದು ಪ್ರಮುಖ.

**ಚರ್ಚೆ:–**

ಶಾಲಾ ಸಾಮಾನ್ಯ ಆಚರಣೆಗಳಲ್ಲಿ ಇಂತಹ ವಿಧಾನಗಳು ಸಂಯೋಜಿಸಿದರೆ, PLD ಕಲ್ಪನೆಯು ಉತ್ಕೃಷ್ಟತೆಗೆ ತಲುಪುತ್ತದೆ. ಮತ್ತು ಶಾಲೆಯಲ್ಲಿರುವ ಪ್ರತಿಯೊಬ್ಬರೂ ತಮ್ಮನ್ನು ಸಹಕಲಿಕಾರ್ಥಿಯಾಗಿ ನೋಡಬಹುದು. ನಿಮ್ಮ ಶಾಲೆಯಲ್ಲಿ PLD ಸಾಮಾನ್ಯ ಅರ್ಥ ಗ್ರಹಿಸುವುದರಿಂದ ಜೋಡಿಯಾಗಿ ಅಥವಾ ಗುಂಪಿನಲ್ಲಿ ಅವಕಾಶವನ್ನು ಹುಡುಕುವ ಚರ್ಚೆಗಳನ್ನು ಹಮ್ಮಿಕೊಳ್ಳಬಹುದು ಇದರಿಂದ ಅನುಭವವನ್ನು ಹಂಚಿಕೊಳ್ಳುವ ಸಂಸ್ಕೃತಿ ಮತು_ಸಹ ಅಭಿವೃದ್ಧಿ ಉಂಟಾಗುತ್ತದೆ. ಸಿಬ್ಬಂಧಿಯ ಪ್ರತಿ ಸದಸ್ಯರು ಕೇವಲ ಶಿಕ್ಷಕರಲ್ಲ , ಅವರ ಸ್ವತಃ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬಹುದು, ಅಲ್ಲದೆ ವಿದ್ಯಾರ್ಥಿಗಳೂ ಜೀವನದುದ್ದಕ್ಕೂ ಕಲಿಕೆ ಎಷ್ಟು ಪ್ರಮುಖ ಎಂಬುವುದನ್ನು ನೋಡಿ ತಿಳಿಯುತ್ತಾರೆ. ಇದು ಶಾಲೆಯ ಗುಣಲಕ್ಷಣಗಳನ್ನು ಬದಲಾಯಿಸುತ್ತದೆ.

# 4 ಅಭಿವೃದ್ಧಿ ಚಟುವಟಿಕೆಗಳ ದಾಖಲೆಗಳ ನಿರ್ವಹಣೆ

ಶಾಲಾ ನಾಯಕನ್ನಾಗಿ ನಿಮ್ಮ ಶಾಲೆಯ ಶಿಕ್ಷಕರ ಅಭಿವೃದ್ಧಿ ಚಟುವಟಿಕೆಗಳ ದಾಖಲೆಗಳನ್ನು ನಿರ್ವಹಿಸುವುದ ಅತಿ ಮುಖ್ಯ. ಇದು ಶಿಕ್ಷಕರ ಕಾರ್ಯನಿರ್ವಹಣೆಯನ್ನು ಉತ್ತಮಗೊಳಿಸವುದು ಮತ್ತು ಉತ್ತೇಜಿಸುವುದರಿಂದ ವಿದ್ಯಾರ್ಥಿಗಳ ಕಲಿಕಾ ಸುಧಾರಣೆಗೆ ನೀವು ತೋರುವ ಬದ್ಧತೆಗೆ ಇರುವ ಸಾಕ್ಷಿ. ಸಂಪನ್ಮೂಲ ವಿಭಾಗದಲ್ಲಿ ಸೂಚಿಸಿರುವ ದಾಖಲೆ ನಿರ್ವಹಣಾ ಹಾಳೆಗಳು ಮತ್ತು ತರಬೇತಿಯ ಹಾಜರಾತಿಯ ದಾಖಲೆಗಳಿಂದ ನೀವು ಪ್ರತಿ ಶಿಕ್ಷಕರ ಸುಧಾರಣೆಯನ್ನು ಕ್ರಮಬದ್ಧಗೊಳಿಸುವುದು ಮಾತ್ರವಲ್ಲ ಶಾಲೆಯ ಅಭಿವೃದ್ಧಿಗೆ ತೆಗೆದುಕೊಂಡ ಕ್ರಮಗಳನ್ನು ಕ್ರಮಬದ್ಧಗೊಳಿಸುತ್ತದೆ. ತಮ್ಮ ಅಭಿವೃದ್ಧಿಯ ದಾಖಲೆಗಳನ್ನು ಸ್ವತಃ ನಿರ್ವಹಿಸುವುದು ಶಿಕ್ಷಕರ ಜವಾಬ್ದಾರಿ. ತಾವು ಭಾಗವಹಿಸಿದ ಶಾಲೆಯ PLD ಚಟುವಟಿಕೆಗಳ ದಾಖಲೆಗಳನ್ನು ನಿರ್ವಹಿಸುವ ಅಗತ್ಯವಿಲ್ಲ ಆದರೆ ತೆಗೆದುಕೊಂಡ ತರಬೇತಿಗಳ ದಿನಾಂಕಗಳನ್ನು ನಮೂದಿಸಿಕೊಂಡರೆ ಸಾಕು. ಕಲಿಕಾ ಡೈರಿ ಅಥವಾ ಪೋರ್ಟ್‌ಪೋಲಿಯೋ ಗಳನ್ನು ಇಡುವುದು ಒಂದು ಕ್ರಮ. ಇದರಿಂದ ಶಿಕ್ಷಕರು ತಮ್ಮ ಪ್ರಗತಿಯನ್ನು ಹಿಡಿದಿಟ್ಟುಕೊಳ್ಳಬಹುದು ಮಾತ್ರವಲ್ಲ, ತಮ್ಮ ಸುಧಾರಣೆ ಅಭ್ಯಾಸಕ್ಕೆ ಪುರಾವೆಗಳನ್ನು ದಾಖಲಿಸುವುದರಿಂದ ಅವರ ವೃತ್ತಿಪರ ಅಭಿವೃದ್ಧಿಗೆ ತಮ್ಮ ಬದ್ದತೆಯನ್ನು ಪ್ರದರ್ಶಿಸಲು ಸಾಧ್ಯ.

ಒಬ್ಬ ಶಿಕ್ಷಕ ತನ್ನ ವೃತ್ತಿಪರ ಅಭಿವೃದ್ಧಿಯನ್ನು ದಾಖಲಿಸಿ ಅದನ್ನು ಕೇವಲ ಅವನ ಪ್ರತಿಫಲನಕ್ಕೆ ಮಾತ್ರವಲ್ಲ, ನೆನಪಿಸಿಕೊಳ್ಳಲು ಹಾಗೂ ಅವಲೋಕಿಸಲು ಬಳಸಿದ ಕೇಸ್‌ಸ್ಟಡಿಯನ್ನು ಈ ಕೆಳಗೆ ನೀಡಲಾಗಿದೆ. ಅವರು ತನ್ನ ವಿಚಾರಗಳನ್ನು ಟಿಪ್ಪಣಿ ಮಾಡಿಕೊಂಡಿರುತ್ತಾರೆ. ಅವರ PLD ಚಟುವಟಿಕೆಗಳ ಪುರಾವೆಗಳನ್ನು ಇತರರೊಡನೆ ಹಂಚಿಕೊಳ್ಳಬೇಕಾದ ಸಂದರ್ಭದಲ್ಲಿ ತನ್ನ ದಾಖಲೆಗಳನ್ನು ಬಳಸುತ್ತಾರೆ.

## ಕೇಸ್ ಸ್ಟಡಿ 2: ಬೋಧನೆಯನ್ನು ತುಂಬಾ ಪ್ರೀತಿಸುವ ಶ್ರೀ ಕಪೂರ್ ಶಾಲಾ ಆಧಾರಿತ PLD ದಾಖಲೆಗಳನ್ನು ಇಡುವರು.

ಅವರ ತಂದೆ ಮತ್ತು ಚಿಕ್ಕಮ್ಮ ಇವರೂ ಶಿಕ್ಷಕರಾಗಿದ್ದು ಬೋಧಿಸುವುದು ರಕ್ತದಲ್ಲಿ ಬಂದಿದೆ ಅಂದು ಭಾವಿಸುತ್ತಿದ್ದರು. ಅರ್ಹತೆಯನ್ನು ಪಡೆದ ನಂತರ ಅವರು ಬಡ ನಗರ ಪ್ರದೇಶದ ಮಧ್ಯಮ ಗಾತ್ರದ ಶಾಲೆಯಲ್ಲಿ ಬೋಧನೆಯನ್ನು ಪ್ರಾರಂಭಿಸಿದರು. ಎರಡು ವರ್ಷಗಳಲ್ಲಿ , ಕೆಲವು ಹೊಸ ವಿಚಾರಗಳ ಅಗತ್ಯವಿದೆ ಎಂದು ಭಾವಿಸಿದರು, ಆದರೆ ತನ್ನ ವಿದ್ಯಾರ್ಥಿಗಳ ಉತ್ಸಾಹ ಮತ್ತು ಪಾಠಕ್ಕೆ ನೀಡುವ ಪ್ರೇರಣೆಯು, ತಾನು ಶಿಕ್ಷಕ ಶಿಕ್ಷಣದಲ್ಲಿ ಕಲಿತ ಎಲ್ಲ ವಿಷಯಗಳನ್ನು ಜಾರಿಗೊಳಿಸಲು ಬಯಸುತ್ತಾರೆ. ಶ್ರೀ. ಕಪೂರ್ ರವರು ಶಾಲಾ ನಾಯಕರೊಡನೆ ಸಂಭಾಷಿಸಿದಾಗ ,ಅವರು ಮೂರು PLD ಚಟುವಟಿಕೆಗಳನ್ನು ಶಾಲೆಯಲ್ಲಿ ಹಮ್ಮಿಕೊಳ್ಳಲು ಸಲಹೆ ನೀಡುತ್ತಾರೆ. ಮೊದಲು ಅತ್ಯತ್ತಮ ಶಿಕ್ಷಕರಾದ ಶ್ರೀ.ಫಾರೂಕ್‌ರವರ ವಿಜ್ಞಾನ ಪಾಠ ವೀಕ್ಷಣೆಮಾಡುವುದು, ಎರಡನೇಯದಾಗಿ ಅವರು ಗಣಿತ ಮತ್ತು ಕ್ರೀಡಾ ಪಾಠಗಳನ್ನು ಹೊಂದಿಸಿಕೊಂಡು ಗಣಿತ ಪಾಠದಲ್ಲಿ ಹುಡುಗರನ್ನು ತೊಡಗಿಸಿಕೊಳ್ಳುವ ಮಾರ್ಗವನ್ನು ಅನುಸರಿಸಲು, ಮತ್ತು ಮೂರನೇಯದಾಗಿ, ಮುಂದಿನ ಅವಧಿಗೆ ಸೇರುವ ಹೊಸ ಶಿಕ್ಷಕರಿಗೆ ಜ್ಞಾನ ಮತ್ತು ಕೌಶಲ್ಯಗಳನ್ನು ಗಳಿಸಲು ಮೆಂಟರಿಂಗ್ ಮಾಡುವ ಕ್ರಮ. ಶ್ರೀ ಕಪೂರ್ ಇವೆಲ್ಲವೂ ಉಪಯುಕ್ತವೆಂದು ಒಪ್ಪಿಕೊಂಡರು. ಒಪ್ಪಿದ ಒಂದು ಸಂಕ್ಷಿಪ್ತ ಯೋಜನೆ ಅವರ ಫೈಲ್ ಮತ್ತು ನೋಟ್‌ಪುಸ್ತಕದಲ್ಲಿ ಇರಿಸಲಾಯಿತು. ಶ್ರೀ.ಫಾರೂಕ್‌ರವರ ಪಾಠ ವೀಕ್ಷಣೆಗೆ ಶ್ರೀ ಕಪೂರ್‌ರವರು ತೆರಳಿದಾಗ ತಾನು ವೀಕ್ಷಿಸಿದ ಅಂಶಗಳನ್ನು ಟಿಪ್ಪಣಿ ಮಾಡಿಕೊಂಡು ನಂತರ ಶ್ರೀ.ಫಾರೂಕ್‌ರವರೊಡನೆ ಪಾಠ ಯೋಜಿಸಿದ ಮತ್ತು ಬೋಧಿಸದ ಬಗ್ಗೆ ಚರ್ಚಿಸಲಾಯಿತು. ಶ್ರೀ ಕಪೂರ್‌ರವರು ತನ್ನ ಟಿಪ್ಪಣಿ ಪುಸ್ತಕದಲ್ಲಿ ತನ್ನ ಪಾಠಕ್ಕೆ ತಾನು ಸೇರಿಸಿಕೊಳ್ಳ ಬಹುದಾದ ಸಲಹಾ ಅಂಶಗಳನ್ನು ಸೇರಿಸಿಲಾಯಿತು. ಎರಡು ವಾರದ ನಂತರ ವಿಜ್ಞಾನ ಪಾಠದಲ್ಲಿ ನೋಡಿದ ಒಂದು ಚಟುವಟಿಕೆಯನ್ನು ಪುನರಾವರ್ತಿಸುತ್ತಾರೆ , ಅದು ಹೇಗಿತ್ತು ಎಂಬುವುದನ್ನು ಟಿಪ್ಪಣಿ ಮಾಡಿಕೊಳ್ಳುತ್ತಾರೆ. ಪ್ರತಿ ಅಂಶಗಳನ್ನು ದಾಖಲಿಸುವಾಗ ಬಹಳ ಎಚ್ಚರಿಕೆಯಿಂದ ಮಾಡಿಕೊಳ್ಳುತ್ತಿದ್ದರು ಆದರೆ ಸ್ವಚ್ಛ ಮತ್ತು ಇತರರಿಗೆ ಸ್ಪಷ್ಟವಾಗಿರಬೇಕೆಂದಿರಲಿಲ್ಲ. ಯಾವುದೇ ಸಮಯದಲ್ಲಿ ಬರೆಯಲು ಇಚ್ಚಿಸಿದರೆ ಅಧೇ ಪುಸ್ತಕದಲ್ಲಿ ಬರೆಯುತ್ತಿದ್ದರು. ಶಾಲಾ ನಾಯಕರು ಗಣಿತ ಮತ್ತು ಕ್ರೀಡಾ ವಿಷಯವನ್ನು ಜೋಡಿಸುವುದರ ಮೂಲಕ ತನ್ನ ಕಲ್ಪನೆಗೂ ಜೋಡಿಸಿರುವುದರಿಂದ ಶ್ರೀ ಕಪೂರ್‌ರವರಿಗೂ ಬಹಳ ಸಂತೋಷವಾಯಿತು. ಆದುದರಿಂದ ಅವರು ಗಣಿತದ ಪಠ್ಯಕ್ರಮ ಮತ್ತು ಪಾಠ ಪುಸ್ತಕವನ್ನು ಓದುವುದರಲ್ಲಿ ಅನೇಕ ಸಂಜೆಗಳನ್ನು ಕಳೆದರು. ಆನ್ ಲೈನ್‌ನಲ್ಲಿ ಈ ಕ್ಷೇತ್ರಕ್ಕೆ ಸಂಬಂಧಿಸಿದ ಸಂಶೋಧನೆ ಮತ್ತು ಅಭ್ಯಾಸಗಳನ್ನು ನೋಡುತ್ತಿದ್ದರು ಮತ್ತು ತನ್ನ ಪರಿಕಲ್ಪನೆಯ ಬಗ್ಗೆ ಒಬ್ಬಿಬ್ಬರು ಸಹೋದ್ಯೋಗಿಗಳೊಡನೆ ಮಾತನಾಡಿದರು ಅವರು ನೀಡಿದ ಸಲಹೆ ಬಹಳ ಉಪಯುಕ್ತವಾಗಿತ್ತು. ಶ್ರೀ ಕಪೂರ್‌ರವರು ಅಭಿವೃದ್ಧಿಗೊಂಡ ತನ್ನ ಪರಿಕಲ್ಪನೆಯ ಬಗ್ಗೆ ಟಿಪ್ಪಣಿ ಮಾಡಿಕೊಂಡರು. ಅವರು ಕೆಲವು ಚಟುವಟಿಕೆಗಳನ್ನು ತರಗತಿಯಲ್ಲಿ ಪ್ರಯತ್ನಿಸಿದರು ಮತ್ತು ವಿದ್ಯಾರ್ಥಿಗಳಿಂದ ಹಿಮ್ಮಾಹಿಯನ್ನು ಕೇಳಿದರು., ಅದನ್ನು ಮುಂದಿನ ದಿನಗಳಿಗಾಗಿ ಉಲ್ಲೇಖಿಸಿದರು. ಅಂತಿಮವಾಗಿ ಸಿಬ್ಬಂಧಿ ಗುಂಪಿಗಾಗಿ ಈ ವಿಧಾನ ಹೇಗೆ ಕೆಲಸ ನಿರ್ವಹಿಸಬಹುದು ಎಂಬುವುದರ ಬಗ್ಗೆ ಒಂದು ಪ್ರಬಂಧವನ್ನು (paper)ವನ್ನು ಬರೆದರು ಮತ್ತು ಅದಕ್ಕೆ ಧನಾತ್ಮಕವಾದ ಹಿಮ್ಮಾಹಿತಿ ದೊರೆಯಿತು. ಅವನ್ನು ದಾಖಲಿಸಿ ಇಟ್ಟುಕೊಂಡರು. ಹಲವು ತಿಂಗಳ ನಂತರ ಇಬ್ಬರು ಶಿಕ್ಷಕರು ಶ್ರೀ ಕಪೂರ್‌ರವರ ವಿಧಾನವನ್ನು ಬಳಸಿಕೊಳ್ಳುತ್ತಿರುವರು. ಸರಿಯಾಗಿ ಮೆಂಟರ್ ಮಾಡಬೇಕೆಂಬ ಉದ್ದೇಶದಿಂದ ಶ್ರೀ ಕಪೂರ್‌ರವರು ಹೊಸ ಶಿಕ್ಷಕರಿಗೆ ಮೆಂಟರಿಂಗ್ ಮಾಡುವ ಮೊದಲು ಮೆಂಟರಿಂಗ್ ಅಭ್ಯಾಸಕ್ಕೆ ಅನೇಕ ಪುಸ್ತಕ ಮತ್ತು ಇಂಟರ್‌ನೆಟ್‌ನ್ನು ಬಳಸಿಕೊಂಡರು. ಅವರು ಆನ್‌ಲೈನ್‌ನಲ್ಲಿ TESS-India unit Transforming teaching-learning process: mentoring and coaching:

ಪತ್ತೆ ಮಾಡಿದರು . ಕೋರ್ಸ್‌ಗೆ ಬೌತಿಕವಾಗಿ ಹಾಜರಾಗದೆ ಕಲಿಯುವ ಅವಕಾಶವಿರುವುದು ಕಂಡು ಬಂದಿತು. ತಾನು ನೀಡಿರುವ ಮಾರ್ಗದರ್ಶನಕ್ಕೆ ಸ್ವತಃ ಟಿಪ್ಪಣಿ ಪುಸ್ತಕವನ್ನು ಇಟ್ಟು ಅದರಲ್ಲಿ ತಾನೇನು ಮಾಡಿದೆ ಮತ್ತು ಮತ್ತಷ್ಟು ಉತ್ತಮಗೊಳಿಸಲು ತಾನೇನು ಮಾಡಬಹುದಾಗಿಟ್ಟು ಎಂಬುವುದನ್ನು ದಾಖಲಿಸಿಕೊಡರು. ಇದು ಅವರಿಗೆ ' ಮಾರ್ಗದರ್ಶನದ ಪ್ರತಿಫಲನ ಪಡೆಯಲು ಸಹಕಾರಿಯಾಯಿತು , ಅದು ಅವರನ್ನು ಶಾಲಾ ನಾಯಕನ ಅನುಭವದ ಬಗ್ಗೆ ಕೇಳಿದಾಗ ಉತ್ತಮವಾಗಿ ಮಾತನಾಡಲು ಸಾಧ್ಯವಾಯಿತು. ಶ್ರೀ ಕಪೂರ್‌ರವರು ದಾಖಲಿಸಿದ ಟಿಪ್ಪಣಿಯು ಅನೌಪಚಾರಿಕವಾಗಿದ್ದು, ಅದು ಅವರಿಗಾಗಿ ಬರೆದಿರುವುದು–ಅದನ್ನು ಅವರು ತಮ್ಮ ಮೊದಲ ವರ್ಷ ಶಿಕ್ಷಕರಾಗಿದ್ದಾಗ ಪ್ರಾರಂಭಿಸಿ ಮುಂದುವರಿಸಿದರು. ಇದು ಅವರ ಅಭಿವೃದ್ಧಿ ಹೇಗಾಯಿತು ಎಂಬುವುದನ್ನು ಹಿಂತಿರುಗಿ ನೋಡಲು ಸಹಕಾರಿ ಅಲ್ಲದೆ ಉತ್ತಮ ಶಿಕ್ಷಕನಾಗಲು ಮತ್ತೇನು ಮಾಡಬಹುದಾಗಿತ್ತು ಎಂಬುವುದು ತಿಳಿಯುವುದು. ಅವರು ಮತ್ತೊಂದು ಕೆಲಸಕ್ಕೆ ಅರ್ಜಿ ಹಾಕಿದಾಗ ತನ್ನನ್ನು ಪುನಶ್ಚೇತನಗೊಳಿಸಿಕೊಂಡು ಸಂದರ್ಶನಕ್ಕೆ ಅಣಿಯಾಗಲು ಅವರ ಟಿಪ್ಪಣಿ ಅಮೂಲ್ಯ.

## ಚಟುವಟಿಕೆ 5: ಸ್ವಂತ ದಾಖಲೆಗಳನ್ನು ಆಯೋಜಿಸುವುದು.

ಸ್ವತಃ ಘಟಕಗಳ ನಿರ್ವಹಣೆ ಮತ್ತು ಅಬಿವೃದ್ಧಿ; ನಿರ್ವಹಣೆ ಮತ್ತು ನಿಮ್ಮ ಅಬಿವೃದ್ಧಿ: TESS-India ದಲ್ಲಿ ಬರುವ ಈ ಘಟಕಗಳ ಬಗ್ಗೆ ನೀವು ಅಧ್ಯಾಯನ ಮಾಡಿದ್ದರೆ ನಿಮ್ಮ ಮತ್ತು ನಿಮ್ಮ ಶಿಕ್ಷಕರ PLD ಹೇಗೆ ಸಮಾಂತರವಾಗಿ ಸಾಗುತ್ತದೆ ಎಂಬುವುದರ ಬಗ್ಗೆ ಯೋಚಿಸಲು ಪ್ರಾರಂಭಿಸುತ್ತೀರಿ. ಶಾಲಾ ನಾಯಕನ್ನಾಗಿ ನಿಮ್ಮ PLD ಹೇಗೆ ದಾಖಲಿಸುತ್ತೀರಿ ಎಂಬುವುದನ್ನು ಯೋಚಿಸಿ. ಶ್ರೀ ಕಪೂರ್‌ರಂತೆ ಆಯೋಜಿಸಲು ಬಯಸುತ್ತೀರಾ? ಕೇಸ್ ಸ್ಟಡಿಯನ್ನು ಬಳಸಿ ಅವರು ನಿರ್ವಹಿಸಿದ ದಾಖಲೆಗಳ ವಿಧಗಳನ್ನು ಪಟ್ಟಿಮಾಡಿ.(ಉ.ದಾ.ಯೋಜನೆ, ಕೆಲವು ಕಲ್ಪನೆಗಳು, ಪಟ್ಟಿ) ಮತ್ತು ಅವುಗಳ ಬಳಕೆ ಏನು ಎಂಬ ಪಟ್ಟಿಯನ್ನು ತಯಾರಿಸಿ. ಇದು ನಿಮಗೆ ನಿಮ್ಮ PLD ಗೆ ಇಡಬೇಕಾದ ಟಿಪ್ಪಣಿಗಳ ಬಗ್ಗೆ ಯೋಚಿಸಲು ಸಹಕಾರ ನೀಡುತ್ತದೆ. ಕಲಿಕಾ ಡೈರಿಯನ್ನು ನೀವು ಇಡುವುದಾದರೆ ಈ ಘಟಕದ ಅಧ್ಯಾಯನದಲ್ಲಿ ನಿಮಗೆ ಅದು ಆಚರಣೆಗೆ ಬರುತ್ತದೆ. ತನ್ನ ಸಿಬ್ಬಂಧಿಗಳಲ್ಲಿ ಕಾಣಬಯಸುವ ಅಭ್ಯಾಸಗಳಿಗೆ ಒಬ್ಬ ಉತ್ತಮ ಶಾಲಾ ನಾಯಕನೇ ಮಾದರಿಯಾಗುತ್ತಾನೆ. ನಿಮ್ಮಲ್ಲಿ ಅಭಿವೃದ್ಧಿಗಳನ್ನು ದಾಖಲಿಸಲು ಈಗಾಗಲೇ ನೋಟ್ ಪುಸ್ತಕ

ಅಥವಾ ಫೈಲ್ ಇಲ್ಲದಿದ್ದರೆ ನೀವು ಒಂದನ್ನು ಇಡಲೇ ಬೇಕು. ನಿಮ್ಮ ಬಿಡುವಿಲ್ಲದ ಮತ್ತು ಬೇಡಿಕೆಯ ಕೆಲಸದ ದಿನದ ವಾಸ್ತವಿಕೆಯನ್ನು ಪರಿಗಣಿಸುವ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲು ಕೆಲವು ನಿಮಿಷಗಳನ್ನು ತೆಗೆದುಕೊಳ್ಳಿ.

- ನಿಮ್ಮ ಸ್ವಂತ PLD ದಾಖಲೆಯನ್ನು ನಿರ್ವಹಿಸಲು ನಿಮ್ಮ ವಿರುದ್ಧವಿರುವ ಸಂಚುಗಳು ಏನು?

# 5 ನಿಮ್ಮ ಶಾಲೆಯಲ್ಲಿ PLD ಯನ್ನು ಕ್ರಮಬದ್ಧಗೊಳಿಸುವುದು

ಇಲ್ಲಿಯವರೆಗೆ ಈ ಘಟಕದಲ್ಲಿ ನಿಮ್ಮ ಶಾಲೆಯಲ್ಲಿ PLD ಸರಿಯಾಗಿ ಸ್ಥಾಪಿಸಲಾಗಿರುವುದಿಲ್ಲವೆಂದು ಊಹಿಸಿಲಾಗಿದೆ ಮತ್ತು ಕೆಲವು ಸಣ್ಣ ರೀತಿಯಲ್ಲಿ ಪ್ರಾರಂಭಿಸುವ ಮಾರ್ಗವನ್ನು ಸೂಚಿಸಿದೆ. ಆದರೆ ನೀವು ನಿಮ್ಮ ಶಾಲೆಯಲ್ಲಿ ಎಲ್ಲಾ ಮಟ್ಟಗಳಲ್ಲಿ ಎಲ್ಲಾ ಸಿಬ್ಬಂಧಿಗಳಿಗೆ ಪ್ರಕ್ರಿಯೆಯನ್ನು ಕ್ರಮಬದ್ಧಗೊಳಿಸುವ ಗುರಿಯನ್ನು ಇಟ್ಟುಕೊಳ್ಳಬೇಕು. ಶಾಲಾ ಸಮುದಾಯದ ಪ್ರತಿ ಸದಸ್ಯರು ಕಲಿಕೆಯ ಸಂಸ್ಥೆಯ ಭಾಗ ಆದುದರಿಂದ ವೈಯಕ್ತಿಕ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡು, ವಿದ್ಯಾರ್ಥಿಗಳಿಗೆ ಕಲಿಕೆಯು ಅಜೀವ ಪ್ರಕ್ರಿಯೆ ಎಂದು ನಿರೂಪಿಸಬೇಕು. PLD ಶಾಲೆಯಲ್ಲಿ ನಿಯಮಿತವಾಗಿ ಸಂಭವಿಸುತ್ತದೆ ಹಾಗೂ ಸಾಮಾನ್ಯ ಚಟುವಟಿಕೆಯಾದರೆ, ಅದು ಶಿಕ್ಷಕರಿಗೆ ತಮ್ಮ ಅತ್ಯುತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವ ಸಹಜ ಪ್ರಕ್ರಿಯೆಯಾಗುತ್ತದೆ , ಅಭಿವೃದ್ಧಿ ಕಾರ್ಯಕ್ರಮಗಳ ರೂಪುರೇಷೆಗಳಿಗೆ ದಾರಿಯಾಗುವುದು ಮತ್ತು ಔಪಚಾರಿಕ ಅಥವಾ ಅನೌಪಚಾರಿಕವಾಗಿ ವೈಯಕ್ತಿಕವಾಗಿ ಅಥವಾ ಗುಂಪಿನಲ್ಲಿ ಅಭಿವೃದ್ಧಿಹೊಂದುವುದರ ಮೂಲಕ ಸಿಬ್ಬಂಧಿಗಳಲ್ಲಿ ಕಲಿಕೆ ಉಂಟಾಗಲು ಮತ್ತು ಪ್ರೇರಣೆ ಹೊಂದುವುದು ಮತ್ತು ಸೃಜನಶೀಲರಾಗುವರು. ಯಾವಾಗ ಅವರ PLD ಯೋಜಿಸಿ, ಮೇಲ್ವಿಚಾರಣೆ ಮಾಡಿ ಮತ್ತು ಅವಲೋಕನ ಮಾಡಿದಾಗ ಅವರು ತಮ್ಮ ಸವಾಲುಗಳನ್ನು ಮತ್ತು ಯಶಸ್ಸನ್ನು ಬೋಧನಾ ವರ್ಗದವರೊಡನೆ ಹಂಚಿಕೊಳ್ಳುವರು ಅದೇ ಸಮಯಲ್ಲಿ

ಅವರು ಒಳನೋಟವನ್ನು ಪಡೆಯುವುದರೊಂದಿಗೆ ತಮ್ಮ ಅಭ್ಯಾಸದ ಅಭಿವೃದ್ಧಿಗೆ ಅವಕಾಶ ದೊರೆಯುತ್ತದೆ.

ನೀವು ಇಡಬೇಕಾದ ಗುರಿಗಳು:–

- ಶಿಕ್ಷಕರ ನಡುವೆ ಮತ್ತು ಶಿಕ್ಷಕರೊಡನೆ PLD ಯ ಬಗ್ಗೆ ಸಾಮಾನ್ಯ ಸಂಭಾಷಣೆ.
- PLD ಅವಕಾಶಗಳ ಬಗ್ಗೆ ಸುಲಭವಾಗಿ ಮಾಹಿತಿ
- ಶಿಕ್ಷಕರು ತಮ್ಮ PLD ಯ ಕ್ರಿಯಾ ಯೋಜನೆಯಂತೆ ಕೆಲಸ ನಿರ್ವಹಿಸುವುದು.
- PLD ಚಟುವಟಿಕೆಗಳ ಫಲಿತಾಂಶಗಳಿಗೆ ಮೇಲ್ವಿಚಾರಣೆ ಮತ್ತು ಸುಧಾರಣೆಗೆ ಬೆಂಬಲ.
- PLD ಯೋಜನೆಗಳಿಗೆ ದಾಖಲೆಗಳು, ಚಟುವಟಿಕೆಗಳು ಮತ್ತು ಕಾಲನಂತರದ ಫಲಿತಾಂಶಗಳು ಇವು ಕ್ರಮಬದ್ಧಗೊಳಿಸಿದ PLD ಹವಾ ನಿಮ್ಮ ಶಾಲೆಯಲ್ಲಿ ಕಲಿಕಾರ್ಥಿಯ ಫಲಿತಾಂಶದ ಸುಧಾರಣೆಗೆ ಕಾರಣವಾಗುತ್ತದೆ.

# 6 ಸಾರಾಂಶ

ಈ ಘಟಕದಲ್ಲಿ ನೀವು ಶಿಕ್ಷಕರ ಅಭಿವೃದ್ಧಿ ಏನನ್ನು ರೂಪಿಸುತ್ತದೆ, ಏನನ್ನು ಒಳಗೊಂಡಿದೆ, ಮತ್ತು ಶಾಲೆಯ ಒಳಗೆ ಏನನ್ನು ಕಲಿಯಬಹುದು ಎಂಬುವುದನ್ನು ನೋಡಿದೆವು. ಶಿಕ್ಷಣ ಮತ್ತು ತರಬೇತಿಗಳು ಮಾತ್ರ ಕಲಿಕೆಯ ಮಾರ್ಗ ಅಲ್ಲ. ಒಂದು ಬೋಧನಾ ವೃತ್ತಿ ನಿರಂತರ ಕಲಿಕೆಯನ್ನು ಒಳಗೊಂಡಿರುತ್ತದೆ. ಸಿಬ್ಬಂಧಿ ವರ್ಗಗಳ ನಿರಂತರ ಅಭಿವೃದ್ಧಿಗಾಗಿ ಶಾಲಾ ನಾಯಕನು ನಿರೀಕ್ಷೆಗಳನ್ನು ಹುಟ್ಟುಹಾಕುವ ಪಾತ್ರವಹಿಸಿ, ಅಭಿವೃದ್ಧಿಗೆ ಅವಕಾಶಗಳನ್ನು ಕಲ್ಪಿಸಬೇಕು . ನೀವು ನೋಡಿರುವ ಕೆಲವು ಟೆಂಪ್ಲೇಟ್‌ಗಳು ನಿಮಗೆ ನಿಮ್ಮ ಶಾಲೆಯಲ್ಲಿ PLD ಕಾರ್ಯಗತಗೊಳಿಸಲು ಸಹಾಯಮಾಡಬಹುದು ಮತ್ತು ನೋಡಿರುವ ಕೇಸ್‌ಸ್ಟಡಿಗಳು ಸಿಬ್ಬಂಧಿಗಳನ್ನು ತೊಡಗಿಸಿಕೊಳ್ಳುವುದು ಹೇಗೆ ಹಾಗೂ ದಾಖಲೆಗಳನ್ನು ಇಡುವುದು ಹೇಗೆ ಎಂದು ಯೋಚಿಸಲು ಸಹಾಯಮಾಡುತ್ತದೆ. ವಿದ್ಯಾರ್ಥಿಗಳ ಕಲಿಕಾ ಅನುಭವಕ್ಕೆ ಪ್ರಯೋಜನವನ್ನು ಪಡೆಯಲು ನಿಮ್ಮ ಸಿಬ್ಬಂಧಿಗಳ ಅಭ್ಯಾಸಗಳನ್ನು ಸುಧಾರಿಸುವಂತೆ ಮಾಡುವುದು ಇದರಲ್ಲಿ ಬರುವ ಪ್ರಚೋದಕ ಭಾಗ. ಯಾವ ಶಿಕ್ಷಕ ತಮ್ಮ ಸ್ವ ಕಲಿಕೆಗೆ ಬದ್ಧರಾಗಿರುತ್ತಾರೋ ಅವರು ಸ್ವಾಭಾವಿಕವಾಗಿ ವಿದ್ಯಾರ್ಥಿಗಳು ಅವರ ದಾರಿಯಲ್ಲಿ ನಡೆಯುವಂತೆ ಮಾಡುತ್ತಾರೆ.

ಬೋಧನಾ ಕಲಿಕಾ ಪ್ರಕ್ರಿಯೆಯ ಪರಿವರ್ತನೆ ಇದರ ಪ್ರಮುಖ ಕ್ಷೇತ್ರಗಳಲ್ಲಿ ಈ ಘಟಕವು ಒಂದು ಭಾಗ. (ನ್ಯಾಷನಲ್ ಕಾಲೇಜ್ ಆಫ್ ಲೀಡರ್‌ಶಿಪ್‌ಗೆ ಹೊಂದಿಸಲಾಗಿದೆ) ಇದರಲ್ಲಿ ಇರುವ ಇನ್ನೊಂದು ಘಟಕಕ್ಕೆ ನಿಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ನಿರ್ಮಿಸಲು ಇದು ಉಪಯುಕ್ತವಾಗಬಹುದು.

- *ಪ್ರಾಥಮಿಕ ಶಾಲೆಯ ಬೋಧನೆ ಮತ್ತು ಕಲಿಕೆಯಲ್ಲಿ ಪ್ರಮುಖ ಸುಧಾರಣೆ.*
- *ಪ್ರೌಢಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಪ್ರಮುಖ ಸುಧಾರಣೆ.*
- *ನಿಮ್ಮ ಶಾಲೆಯ ಮೌಲ್ಯಮಾಪನದ ಸುಧಾರಣೆ.*
- *ಶಿಕ್ಷಕರ ಕಾರ್ಯನಿರ್ವಹಣೆಗೆ ಬೆಂಬಲ*

- *ಮಾರ್ಗದರ್ಶನ ಮತ್ತು ತರಬೇತಿ(ಮೆಂಟರಿಂಗ್ ಮತ್ತು ಕೋಚಿಂಗ್).*
- *ಪರಿಣಾಮಕಾರಿ ಕಲಿಕಾ ಸಂಸ್ಕೃತಿಯನ್ನು ನಿಮ್ಮ ಶಾಲೆಯಲ್ಲಿ ಬೆಳೆಸುವುದು.*
- *ವಿದ್ಯಾರ್ಥಿಗಳ ಪರಿಣಾಮಕಾರಿ ಕಲಿಕೆಗಾಗಿ ಸಂಪನ್ಮೂಲಗಳ ನಿರ್ವಹಣೆ.*
- *ನಿಮ್ಮ ಶಾಲೆಯಲ್ಲಿ ತಂತ್ರಜ್ಞಾನದ ಪ್ರಾಮುಖ್ಯತೆ.*

# ಸಂಪನ್ಮೂಲಗಳು

ಸಂಪನ್ಮೂಲ 1: ಪ್ರತಿ ಶಿಕ್ಷಕರೊಡನೆ ಚರ್ಚಿಸಲು ಟೆಂಪ್ಲೇಟ್

| | |
|---|---|
| **ಶಿಕ್ಷಕರ ಹೆಸರು.** | |
| **ದಿನಾಂಕ** | |
| **ಶಿಕ್ಷಕರಾಗಿ ನಿಮ್ಮಲ್ಲಿರುವ ಪ್ರಬಲ ಅಂಶಗಳು** | |
| | |
| **ನೀವು ಯಾವ ವಿಷಯದಲ್ಲಿ ಪ್ರವೀಣರು? ನಾವು ಶಾಲೆಯಲ್ಲಿ ಕೈಗೆತ್ತಿಕೊಳ್ಳದ ಯಾವ ಅಂಶವನ್ನು ಒಪ್ಪಿಸುತ್ತೀರಿ? ನಿಮ್ಮಲ್ಲಿ ಯಾವುದಾದರು ವಿಶೇಷ ಆಸಕ್ತಿ ಅಥವಾ ಕೌಶಲ್ಯಗಳಿವೆಯೇ?** | |
| | |
| **ಉತ್ತಮ ಶಿಕ್ಷಕರಾಗಲು ನಿಮಗೆ ಇರುವ ದಾರಿ ಯಾವುದು? ಅದಕ್ಕಾಗಿ ನೀವೇನು ಮಾಡುತ್ತೀರಿ?** | |
| | |
| **ಇನ್ನೇನಾದರು ಇದ್ದಲ್ಲಿ** | |
| **ಶಾಲಾ ನಾಯಕನ ಸಹಿ** | |

## ಸಂಪನ್ಮೂಲ 2: ಕಥೆ ಹೇಳುವುದು, ಹಾಡುಗಳು, ರೋಲ್‌ಪ್ಲೇ, ಮತ್ತು ನಾಟಕ

ವಿದ್ಯಾರ್ಥಿಗಳು ಸಕ್ರಿಯಾವಾಗಿ ಕಲಿಕಾ ಅನುಭವಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ಕಲಿಕೆ ಉತ್ತಮವಾಗಿರುತ್ತದೆ. ನಿಮ್ಮ ವಿದ್ಯಾರ್ಥಿಗಳು ಇತರರೊಡನೆ ಪರಸ್ಪರ ಆಲೋಚನೆಗಳನ್ನು ಹಂಚಿಕೊಳ್ಳುವುದರಿಂದ ಅವರ ಕಲಿಕೆ ಗಾಢವಾಗುತ್ತದೆ. ಕಥೆ ಹೇಳುವುದು, ಹಾಡುಗಳು, ರೋಲ್‌ಪ್ಲೇ, ಮತ್ತು ನಾಟಕ ಇವೇ ಕೆಲವು ವಿಧಾನಗಳಿಂದ ಗಣಿತ ಮತ್ತು ವಿಜ್ಞಾನವೂ ಸೇರಿದಂತೆ ಪಠ್ಯ ಕ್ರಮದ ಎಲ್ಲ ವ್ಯಾಪ್ತಿಗೂ ಬಳಸಬಹುದು. ಕಥೆಗಳು ನಮ್ಮ ಜೀವನವನ್ನು ಅರ್ಥೈಸಿಕೊಳ್ಳಲು ಸಹಾಯಮಾಡುತ್ತದೆ. ಅನೇಕ ಸಾಂಪ್ರದಾಯಕ ಕಥೆಗಳು ಪೀಳಿಗೆಯಿಂದ ಪೀಳಿಗೆಗೆ ಸಾಗಿವೆ. ನಾವು ಚಿಕ್ಕವರಿದ್ದಾಗ ನಮಗೆ ಹೇಳಿದ ಕಥೆಗಳಲ್ಲಿ ನಾವು ಹುಟ್ಟಿ ಬೆಳೆದ ಈ ಸಮಾಜದ ನಿಯಮ ಮತ್ತು ಮೌಲ್ಯಗಳನ್ನು ತಿಳಿಸಿವೆ. ತರಗತಿಯಲ್ಲಿ ಕಥೆ ಹೇಳುವುದು ಒಂದು ಪ್ರಬಲ ಮಾಧ್ಯಮ. ಅವು

- ಮನರಂಜನೆ, ಕುತೂಹಲಕಾರಿ ಮತ್ತು ಉತ್ತೇಜಕ.
- ನಮ್ಮನ್ನು ದಿನ ಬದುಕಿನಿಂದ ಕಾಲ್ಪನಿಕ ಲೋಕಕ್ಕೆ ಕರೆದೊಯ್ಯುತ್ತದೆ.
- ಸವಾಲುಗಳಿವೆ.
- ಹೊಸ ಆಲೋಚನೆಗಳನ್ನು ಪ್ರಚೋದಿಸುತ್ತದೆ.

- ಭಾವನೆಗಳನ್ನು ಅನ್ವೇಶಿಸಲು ಸಹಾಯಮಾಡುತ್ತದೆ.
- ನಿಜ ಜೀವನದಲ್ಲದ ಪರಹಾರವನ್ನು ಸಂದರ್ಭದ ಸಮಸ್ಯೆಗಳಿಗೆ ಯೋಚಿಸುವದರಿಂದ ಭಯದ ಪ್ರಮಾಣ ಕಡಿಮೆಯಾಗುತ್ತದೆ.

ಕಥೆ ಹೇಳುವಾಗ ವಿದ್ಯಾರ್ಥಿಗಳೊಡನೆ ಕಣ್ಣಿನ ಸಂಪರ್ಕವನ್ನು ದೃಢೀಪಡಿಸಿಕೊಳ್ಳಿ. ವಿವಿಧ ಪಾತ್ರಗಳಿಗೆ ವಿಭಿನ್ನ ಧ್ವನಿಗಳನ್ನು ಬಳಸಲು ಮತ್ತು ಪಿಸುಮಾತು ಅಥವ ಸರಿಯಾದ ಸಮಯದಲ್ಲಿ ಜೋರಾಗಿ ಕೂಗುವ ಮೂಲಕ ನಿಮ್ಮ ಧ್ವನಿಯ ಪ್ರಮಾಣ ಮತ್ತು ಧ್ವನಿ ಬದಲಾಗುವುದನ್ನು ಕೇಳಿ ಅವರು ಸಂತೋಷ ಪಡುತ್ತಾರೆ. ಉದಾ. ನಿಮ್ಮದೇ ಮಾತುಗಳಲ್ಲಿ ಪುಸ್ತಕವಿಲ್ಲದೇ ಕಥೆಯ ಪ್ರಮುಖ ಘಟನೆಗಳನ್ನು ಮೌಖಿಕವಾಗಿ ಹೇಳಬಹುದು. ಕಥೆಯನ್ನು ತರಗತಿ ಕೋಣೆಯಲ್ಲಿ ಜೀವನಕ್ಕೆ ಅಳವಡಿಸಲು ರಂಗಪರಿಕರಗಳಾದ ಬಟ್ಟೆ ,ಇತರೆ ವಸ್ತುಗಳನ್ನು ತರಬಹುದು. ನೀವು ಕಥೆಯನ್ನು ಪರಿಚಯಿಸುವಾಗ ಅದರ ಉದ್ದೇಶವನ್ನು ಪರಿಚಯಿಸಲು ಮತ್ತು ವಿದ್ಯಾರ್ಥಿಗಳಿಗೆ ಅವರೇನು ಕಲಿಯಬೇಕು ಎಂಬುವುದನ್ನು ವಿವರಿಸಲು ಮರೆಯದಿರಿ. ನೀವು ಪ್ರಮುಖ ಶಬ್ದಕೋಶಗಳನ್ನು ಪರಿಚಯಿಸಬೇಕು ಅಥವಾ ಕಥೆಯಲ್ಲಿ ಅಡಗಿರುವ ಪರಿಕಲ್ಪನೆಗಳ ಬಗ್ಗೆ ಗಮನ ನೀಡಿ. ಸಾಂಪ್ರದಾಯಿಕ ಕಥೆಗಾರನನ್ನು ಶಾಲೆಗೆ ಕರೆಸುವ ಅವಕಾಶ ನೀಡಬಹುದು, ಆದರೆ ಏನನ್ನು ಕಲಿಯಬೇಕು ಎಂಬುವುದು ಕಥೆಗಾರ ಮತ್ತು ವಿದ್ಯಾರ್ಥಿಗಳು ಇಬ್ಬರಿಗೂ ಖಚಿತವಾಗಿರಬೇಕು ಎಂಬುವುದು ನೆನಪಿನಲ್ಲಿರಬೇಕು. ಕಥೆ ಹೇಳುವುದು ವಿದ್ಯಾರ್ಥಿಗಳಲ್ಲಿ ಆಲಿಸುವುದರೊಂದಿಗೆ ಅನೇಕ ವಿದ್ಯಾರ್ಥಿ ಚಟುವಟಿಕೆಗಳನ್ನು ಪ್ರೇರೇಪಿಸುತ್ತದೆ. ಕಥೆಯಲ್ಲಿ ಬರುವ ಎಲ್ಲಾ ಬಣ್ಣಗಳನ್ನು ನಮೂದಿಸಲು ಹೇಳಬಹುದು, ಚಿತ್ರ ಬಿಡಿಸಲು, ಪ್ರಮುಖ ಘಟನೆಗಳನ್ನು ನೆನಪಿಸಿಕೊಳ್ಳಲು, ಸಂಭಾಷಣೆ ಸೃಷ್ಟಿಸಲು, ಅಥವಾ ಕಥೆಯ ಅಂತ್ಯವನ್ನು ಬದಲಾಯಿಸಲು ಹೇಳಬಹುದು. ಅವರನ್ನು ಗುಂಪುಗಳನ್ನಾಗಿ ಮಾಡಿ , ಚಿತ್ರ ಅಥವಾ ರಂಗಪರಿಕರಗಳನ್ನು ನೀಡಿ ಇನ್ನೊಂದು ದೃಷ್ಟಿಕೋನದಿಂದ ಮತ್ತೊಂದು ರೀತಿಯಲ್ಲಿ ಕಥೆ ಹೇಳಲು ನೀಡಬಹುದು. ಒಂದು ಕಥೆಯನ್ನು ವಿಶ್ಲೇಷಿಸುವ ಮೂಲಕ ವಿದ್ಯಾರ್ಥಿಗಳಿಗೆ ಕಟ್ಟು ಕಥೆಯಲ್ಲಿ ವಾಸ್ತವಿಕಥೆ, ವೈಜ್ಞಾನಿಕ ವಿದ್ಯಮಾನಗಳಿಗೆ ವಿವರಣೆ ಅಥವಾ ಗಣಿತದ ಸಮಸ್ಯೆಗಳಿಗೆ ಪರಿಹರಿಸಲು ಕೇಳಬಹುದು. ತಮ್ಮ ಸ್ವರಚಿತ ಕಥೆಗಳನ್ನು ರೂಪಿಸಲು ವಿದ್ಯಾರ್ಥಿಗಳನ್ನು ಕೇಳುವುದು ಶಕ್ತಿಶಾಲಿ ಸಾಧನ. ಅವುಗಳಿಗೆ ನೀವು ರೂಪವನ್ನು ನೀಡಿ, ವಿಷಯ ಮತ್ತು ಭಾಷೆಯನ್ನು ಸರಿಪಡಿಸಿದರೆ ,ವಿದ್ಯಾರ್ಥಿಗಳು ಗಣಿತ ಮತ್ತು ವಿಜ್ಞಾನದಂತಹ ಕ್ಲಿಷ್ಟ ವಿಷಯಕ್ಕೂ ಸ್ವರಚಿತ ಕಥೆ ಯನ್ನು ಹೇಳುವರು . ಪರಿಣಾಮಕಾರಿಯಾಗಿ ಅವರು ಕಲ್ಪನೆಯೊಡನೆ ಆಡುವ ಆಟ, ಅರ್ಥಗಳನ್ನು ಪರಿಶೋಧಿಸುವ ಮತ್ತು ಕಥೆಯ ಅಮೂರ್ತಗಳನ್ನು ರೂಪಕಾಲಂಕಾರದಿಂದ ಅರ್ಥವಾಗುವಂತೆ ಮಾಡುವರು.

ಹಾಡು

ತರಗತಿಯಲ್ಲಿ ಹಾಡುಗಳು ಮತ್ತು ಸಂಗೀತದ ಬಳಕೆ ವಿದ್ಯಾರ್ಥಿಗಳಿಗೆ ಯಶಸ್ಸು ಮತ್ತು ಉತ್ಕೃಷ್ಟತೆಯನ್ನು ಕೊಡುಗೆಯಾಗಿ ನೀಡುತ್ತದೆ. ಒಟ್ಟಾಗಿ ಹಾಡುವುದರಲ್ಲಿ ಬಂಧದ ಪರಿಣಾಮವಿದೆ , ಏಕೆಂದರೆ ವೈಯಕ್ತಿಕ ಪ್ರದರ್ಶನವು ಕೇಂದ್ರೀಕರಿಸಲು ವಿಫಲವಾದಾಗ ವಿದ್ಯಾರ್ಥಿಗಳಿಗೆ ಎಲ್ಲಾ ಒಳಗೊಂಡಿದೆ ಎಂಬ ಅಭಿಪ್ರಾಯ ಮೂಡಲು ಪ್ರಾರಂಭವಾಗುತ್ತದೆ . ಹಾಡುಗಳಲ್ಲಿರುವ ಪದ್ಯ ಮತ್ತು ಪ್ರಾಸ ಸುಲಭವಾಗಿ ನೆನಪಿಟ್ಟುಕೊಳ್ಳಲು ಸಹಾಯಮಾಡುತ್ತದೆ ಮತ್ತು ಭಾಷೆ ಹಾಗೂ ಮಾತನ್ನು ಅಭಿವೃದ್ಧಿಗೊಳಿಸುತ್ತದೆ. ನಿಮಗೆ ನೀವು ಒಬ್ಬ ವಿಶ್ವಾಸ ಗಾಯಕ ಅಲ್ಲದಿರಬಹುದು ಆದರೆ ನಿಮ್ಮ ತರಗತಿಯಲ್ಲಿ ಉತ್ತಮ ಹಾಡುಗಾರರಿರುವ ಬಗ್ಗೆ ಖಚಿತವಿದ್ದರೆ ನೀವು ಅವರನ್ನು ನಿಮ್ಮ ಸಹಾಯಕ್ಕೆ ಕರೆಯಬಹುದು. ನೀವು ಚಲನೆ ಮತ್ತು ಸನ್ನೆಗಳನ್ನು ಬಳಸಿ ಹಾಡಿಗೆ ಜೀವ ತುಂಬಿ ಅರ್ಥ ತಿಳಿಸಲು ಸಹಾಯಮಾಡಬಹುದು. ನಿಮ್ಮ ಉದ್ದೇಶಕ್ಕೆ ಅನುಗುಣವಾಗಿ ನಿಮಗೆ ತಿಳಿದಿರುವ ಹಾಡಿನ ಪದಗಳನ್ನು ಬದಲಾಯಿಸಿ ಬಳಸಬಹುದು. ಹಾಡುಗಳು ಮನಸ್ಸಿನಲ್ಲಿಟ್ಟುಕೊಳ್ಳುವ ಮತ್ತು ಮಾಹಿತಿ ಉಳಿಸಿಕೊಳ್ಳುವ ಒಂದು ಉಪಯುಕ್ತ ಮಾರ್ಗ. ಸೂತ್ರಗಳನ್ನು ಮತ್ತು ಪಟ್ಟಿಯನ್ನೂ ಹಾಡಿನ ರೂಪದಲ್ಲಿ ಅಥವಾ ಪದ್ಯದ ರೂಪದಲ್ಲಿರಬಹುದು. ನಿಮ್ಮ ವಿದ್ಯಾರ್ಥಿಗಳಲ್ಲಿ ಪರಿಷ್ಕರಣೆ ಉದ್ದೇಶಗಳಿಗಾಗಿ ಹಾಡುಗಳನ್ನು ಮತ್ತು ಗಾಯನಗಳನ್ನು ಉತ್ಪಾದಿಸುವ ಸೃಜನಶೀಲತೆ ಇರಬಹುದು.

## ರೋಲ್‌ಪ್ಲೇ

ವಿದ್ಯಾರ್ಥಿಗಳು ರೋಲ್‌ಪ್ಲೇ ಮಾಡುವಾಗ ಒಂದು ಸಣ್ಣ ಸನ್ನಿವೇಶದ ಸಂದರ್ಭದಲ್ಲಿ , ಅವರು ಮಾತನಾಡುತ್ತಾ ನಟನೆ ಮಾಡುವರು, ಅವರು ನಟಿಸುವ ವ್ಯಕ್ತಿಯ ನಡತೆ ಮತ್ತು ಉದ್ದೇಶಗಳನ್ನು ತನ್ನದಾಗಿಸಿಕೊಳ್ಳುವರು. ಯಾವದೇ ಪ್ರತಿಯನ್ನು ನೀಡುವುದಿಲ್ಲ ಆದರೆ ವಿದ್ಯಾರ್ಥಿಗಳಿಗೆ ಸಾಕಷ್ಟು ಮಾಹಿತಿಯನ್ನು ನೀಡಲಾಗುವುದರಿಂದ ತನ್ನ ಪಾತ್ರವನ್ನು ಕಲ್ಪಿಸಿಕೊಳ್ಳಬಹುದು. ಪಾತ್ರ ವಹಿಸುವ ವಿದ್ಯಾರ್ಥಿಗೆ ತನ್ನ ಮಾತು ಮತ್ತು ಭಾವನೆಗಳನ್ನು ನಿರಂತರವಾಗಿ ವ್ಯಕ್ತ ಪಡಿಸಲು ಪ್ರೋತ್ಸಾಯಿಸಬೇಕು. ರೋಲ್‌ಪ್ಲೇಯಿಂದ ಸಾಕಷ್ಟು ಅನುಕೂಲಗಳಿವೆ. ಏಕೆಂದರೆ ಅದು:

- ನಿಜ ಜೀವನದ ಸಂದರ್ಭಗಳಲ್ಲಿ ಇತರರ ಭಾವನೆಗಳನ್ನು ಅರ್ಥೈಸಿಕೊಳ್ಳಲು ಒಳಹೊಕ್ಕಿ ನೋಡಲು ಸಾಧ್ಯವಾಗುತ್ತದೆ.
- ನಿರ್ಧಾರಗಳನ್ನು ಕೈಗೊಳ್ಳುವ ಕೌಶಲ್ಯವನ್ನು ಬೆಳೆಸುತ್ತದೆ.
- ವಿದ್ಯಾರ್ಥಿಗಳನ್ನು ಕಲಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಪ್ರತಿ ವಿದ್ಯಾರ್ಥಿಯ ಕೊಡುಗೆ ಅದರಲ್ಲಿ ಇರುವಂತೆ ಮಾಡುತ್ತದೆ.
- ಉನ್ನತ ಮಟ್ಟದ ಚಿಂತನೆಗೆ ಪ್ರೇರಣೆ ನೀಡುತ್ತದೆ..

ರೋಲ್‌ಪ್ಲೇ ಪುಟ್ಟ ವಿದ್ಯಾರ್ಥಿಗಳಿಗೆ ಸಮಾಜದ ವಿವಿಧ ಸಂದರ್ಭಗಳಲ್ಲಿ ಮಾತನಾಡುವ ವಿಶ್ವಾಸವನ್ನು ಅಭಿವೃದ್ಧಿಗೊಳಿಸುತ್ತದೆ. ಉದಾ ಅಂಗಡಿಯಲ್ಲಿ ಗ್ರಾಹಕನ್ನಾಗಿ ನಟನೆ., ಸ್ಥಳೀಯ ಐತಿಹಾಸಿಕ ಸ್ಮಾರಕಗಳ ಬಗ್ಗೆ ಪ್ರವಾಸಿಗರಿಗೆ ಮಾಹಿತಿ ನೀಡುವುದು ಅಥವಾ ಟಿಕೇಟು ಖರೀದಿಸುವುದು. ನೀವು 'ಕೆಫೆ', 'ವೈದ್ಯರ ಸರ್ಜರಿ',ಅಥವಾ 'ಗ್ಯಾರೇಜ್'ಎಂಬ ಕೆಲವು ರಂಗಪರಿಕರಗಳನ್ನು ಮತ್ತು ಚಿಹ್ನೆಗಳನ್ನು ಬಳಸಿ ಸರಳ ದೃಶ್ಯಗಳನ್ನು ಹೊಂದಿಸಬಹುದು. ನೀವು ವಿದ್ಯಾರ್ಥಿಗಳಲ್ಲಿ "ಇಲ್ಲಿ ಯಾರು ಕೆಲಸ ಮಾಡುತ್ತಾರೆ?', 'ಅವರು ಏನು ಹೇಳಿದರು?' ಮತ್ತು 'ಅವರನ್ನು ನಾವು ಏನು ಕೇಳಬೇಕು?' ಎಂದು ಕೇಳಿ. ಈ ಕ್ಷೇತ್ರದಲ್ಲಿ ಸಂವಾದ ಮಾಡಲು ಪ್ರೋತ್ಸಾಹಿಸಿ, ಅವರು ಬಳಸುವ ಭಾಷೆಯನ್ನು ಗಮನಿಸಿ,. ರೋಲ್‌ಪ್ಲೇ ದೊಡ್ಡ ವಿದ್ಯಾರ್ಥಿಗಳ ಜೀವನ ಕೌಶಲ್ಯವನ್ನು ಅಭಿವೃದ್ಧಿ ಪಡಿಸುತ್ತದೆ. ಉದಾ ತರಗತಿಯಲ್ಲಿ ಸಂಘರ್ಷ ಪರಿಹರಿಸಲು ಏನು ಮಾಡಬೇಕು ಎಂಬುವುದನ್ನು ಹೊರತರಬಹುದು. ನಿಮ್ಮ ಶಾಲೆಯ ಅಥವಾ ಸಮುದಾಯದ ನಿಜವಾದ ಘಟನೆಯನ್ನು ತೆಗೆದುಕೊಳ್ಳುವ ಬದಲು ಅಂತಹದೇ ಘಟನೆಯನ್ನು ನೀವು ವಿವರಿಸಿ, ಪಾತ್ರಾಭಿನಯ ಮಾಡಲು ವಿದ್ಯಾರ್ಥಿಗಳನ್ನು ಆಯ್ಕೆಮಾಡಿ, ಪಾತ್ರಗಳನ್ನು ಹಂಚಿ ಅಥವಾ ಒಂದೊಂದು ಪಾತ್ರವನ್ನು ಅವರೇ ಆಯ್ಕೆ ಮಾಡಿಕೊಳ್ಳಲು ತಿಳಿಸಿ. ಸಿದ್ಧತೆಗೆ ಸಮಯಾವಕಾಶ ನೀಡಿ ಅಥವಾ ತಕ್ಷಣವೇ ಅಭಿನಯಿಸಲು ತಿಳಿಸಿ. ರೋಲ್‌ಪ್ಲೇಯನ್ನು ತರಗತಿಗೆ ಅಭಿನಯಿಸಿ ತೋರಿಸಬಹುದು ಅಥವಾ ಸಣ್ಣ ಗುಂಪಿನಲ್ಲಿ ಕೆಲಸ ನಿರ್ವಹಿಸಿದಾಗ ಅವರನ್ನು ಯಾವುದೇ ಬೇರೆ ಗುಂಪಿನವರು ವೀಕ್ಷಿಸುವುದಿಲ್ಲ. ರೋಲ್‌ಪ್ಲೇಯ ಮುಖ್ಯ ಉದ್ದೇಶ ಅದು ಏನು ಹೊರ ಹೊಮ್ಮುತ್ತದೆಯೋ ಅದರ ಅನುಭವವನ್ನು ಪಡೆಯುವುದು ಎಂಬುವುದನ್ನು ಗಮನಿಸಿ. ಇಲ್ಲಿ ಹೊಳಪು ನೀಡಿದ ಪ್ರದರ್ಶನವಲ್ಲ. ಅಥವಾ ಬಾಲಿವುಡ್ ನಟನಾ ಪ್ರಶಸ್ತಿಗಾಗಿಯೂ ಅಲ್ಲ. ವಿಜ್ಞಾನ ಮತ್ತು ಗಣಿತದಲ್ಲಿಯೂ ರೋಲ್‌ಪ್ಲೇ ಮಾಡಬಹುದು. ವಿದ್ಯಾರ್ಥಿಗಳು ಅಣುವಿನ ವರ್ತನೆಯನ್ನು

ರೂಪಿಸಬಹುದು, ಕಣಗಳ ಗುಣಲಕ್ಷಣಗಳನ್ನು ತೆಗೆದುಕೊಂಡು ಪರಸ್ಪರ ಸಂವಾದ ನಡೆಸಬಹುದು. ಅಥವಾ ಅದರ ಮೇಲೆ ಉಷ್ಣ ಮತ್ತು ಬೆಳಕಿನ ಪರಿಣಾಮದಿಂದಾಗುವ ಗುಣಲಕ್ಷಣಗಳ ಬದಲಾವಣೆಗಳನ್ನು ತಿಳಿಸಬಹುದು. ಗಣಿತದಲ್ಲಿ ಕೋನಗಳ ಮತ್ತು ಆಕಾರಗಳ ಗುಣಗಳನ್ನು ಮತ್ತು ಸಂಯೋಜನೆಗಳನ್ನು ಅನ್ವೇಷಿಸಲು ರೋಲ್‌ಪ್ಲೇ ಮಾಡಬಹುದು.

### ನಾಟಕ

ಅತ್ಯಂತ ಹೆಚ್ಚು ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ನಾಟಕ ಒಂದು ಉತ್ತಮ ತಂತ್ರ. ನಾಟಕ ಕೌಶಲ್ಯ ಮತ್ತು ವಿಶ್ವಾಸವನ್ನು ಅಭಿವೃದ್ಧಿಗೊಳಿಸುತ್ತದೆ. .ಅಲ್ಲದೆ ನಿಮ್ಮ ವಿದ್ಯಾರ್ಥಿಯ ವಿಷಯವನ್ನು ಅರ್ಥೈಸಿಕೊಂಡಿವುದನ್ನು ನಿರ್ಣಯಿಸಲು ಬಳಸಬಹುದು. ಮೆದುಳಿನ ಕೆಲಸವನ್ನು ವಿದ್ಯಾರ್ಥಿಗಳಿಗೆ ಅರ್ಥೈಸಲು ನಾಟಕದಲ್ಲಿ ಟೆಲಿಪೋನ್‌ನಲ್ಲಿ ಹೇಗೆ ಸಂಧೇಶಗಳು ಮೆದುಳಿನಿಂದ ಕಿವಿಗಳಿಗೆ, ಮೂಗು, ಕೈಗಳು , ಮತ್ತು ಬಾಯಿ ಮತ್ತೆ ಹಿಂತಿರುಗುವುದನ್ನು ಅಭಿನಯಿಸಿ ತೋರಿಸಬಹುದು. ಚಿಕ್ಕ ಮೋಜಿನ ನಾಟಕದಲ್ಲಿ ಮರೆಯುವ ಭಯಾನಕ ಪರಿಣಾಮಗಳನ್ನು, ಸಂಖ್ಯೆಗಳನ್ನು ಕಳೆಯುವುದು ಹೇಗೆ ಎಂಬುವುದನ್ನು ತೋರಿಸುವುದರಿಂದ ಅದು ಪುಟ್ಟ ಮಕ್ಕಳ ಮನಸ್ಸಿನಲ್ಲಿ ಸರಿ ವಿಧಾನವನ್ನು ಅಚ್ಚು ಹಾಕುತ್ತದೆ. ತರಗತಿಯ ಉಳಿದವರಿಗೆ, ಶಾಲೆ ಅಥವಾ ಪೋಷಕರಿಗೆ ಮತ್ತು ಸ್ಥಳೀಯ ಸಮುದಾಯಕ್ಕೆ ನಾಟಕ ಪ್ರದರ್ಶನ ನೀಡುತ್ತದೆ. ಇದು ವಿದ್ಯಾರ್ಥಿಗಳಿಗೆ ಗುರಿಯ ಕಡೆಗೆ ಕೆಲಸ ನಿರ್ವಹಿಸುವಂತೆಮಾಡಿ ಅವರನ್ನು ಪ್ರೇರೇಪಿಸುತ್ತದೆ. ಇಡೀ ತರಗತಿಯೇ ನಾಟಕ ನಿರ್ಮಾಣ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುತ್ತದೆ. ವಿಶ್ವಾಸದ ಮಟ್ಟದ ವ್ಯತ್ಯಾಸವನ್ನು ಪರಿಗಣಿಸುವುದು ಮುಖ್ಯವಾಗುತ್ತದೆ. ಎಲ್ಲರೂ ನಾಟಕಕಾರರಾಗಬೇಕೆಂದು ಇಲ್ಲ. ವಿದ್ಯಾರ್ಥಿಗಳು ಬೇರೆ ರೀತಿಯಲ್ಲಿ ತಮ್ಮ ಕೊಡುಗೆಯನ್ನು ನೀಡಬಹುದು.(ಜೋಡಿಸುವುದು, ವೇಷಭೂಷಣ, ರಂಗ ಪರಿಕರಗಳು) ಅವು ಅವರ ಪ್ರತಿಭೆ ಮತ್ತು ವ್ಯಕ್ತಿತ್ವಕ್ಕೆ ಸಂಬಂಧಿಸಿರಬಹುದು. ನಾಟಕವನ್ನು ವಿದ್ಯಾರ್ಥಿಗಳ ಕಲಿಕೆಗೆ ಏಕೆ ಬಳಸಬೇಕು ಎಂಬುವುದು ಪ್ರಮುಖ. ಭಾಷೆಯ ಅಭಿವೃದ್ಧಿಗಾಗಿ(ಉದಾ ಪ್ರಶ್ನೆ ಕೇಳುವುದು ಮತ್ತು ಉತ್ತರಿಸುವುದು), ವಿಷಯ ಜ್ಞಾನ(ಉದಾ ಗಣಿಗಾರಿಕೆಯಿಂದ ಪರಿಸರದ ಮೇಲಿನ ಪರಿಣಾಮ) ಅಥವಾ ನಿರ್ದಿಷ್ಟ ಕೌಶಲ್ಯ ಬೆಳೆಸಲು(ಉದಾ ತಂಡ ಕೆಲಸ) ಕಲಿಕಾ ಉದ್ದೇಶಕ್ಕಾಗಿ ಮಾಡುವ ನಾಟಕ, ಪ್ರದರ್ಶದ ಗುರಿಯಲ್ಲಿ ಕಳೆದು ಹೋಗದಂತೆ ಎಚ್ಚರವಹಿಸಿ.

## ಸಂಪನ್ಮೂಲ 3: ತರಗತಿಯಲ್ಲಿ ಕ್ರಿಯಾ ಸಂಶೋಧನೆಗೆ ಪೀಠಿಕೆ

ಬೆನ್ ಗೋಲ್ಡಾಕ್ರಿ (2013) ಅವರು ಶಿಕ್ಷಣವು ಒಂದು ವೃತ್ತಿ ಆಧಾರಿತ ಪುರಾವೆ ಮತ್ತು ಅದು ಮಕ್ಕಳನ್ನು ಉತ್ತಮ ಫಲಿತಾಂಶದ ಕಡೆಗೆ ಕರೆದೊಂಯ್ಯುತ್ತದೆ ಎಂದು ವಾದಿಸುತ್ತಾರೆ. ನಿರ್ದಿಷ್ಟವಾಗಿ , ಸಂಸ್ಕೃತಿಯ ಬದಲಾವಣೆಯ ಅವಶ್ಯಕತೆ ಇದೆ ಅದರಲ್ಲಿ ಶಿಕ್ಷಕರು ಮತ್ತು ರಾಜಕಾರಣಿಗಳು ಗುರುತ್ತಿಸುವರು–ನಮಗೆ ಯಾವ ಕೆಲಸ ಉತ್ತಮ ಎಂಬುವುದನ್ನು ತಿಳಿದುಕೊಳ್ಳುವ ಅಗತ್ಯವಿಲ್ಲ– ಕೆಲಸ ನಿರ್ವಹಿಸದಕ್ಕೆ ಪುರಾವೆಗಳು ಬೇಕು ಎಂದು ವಾದಿಸುತ್ತಾರೆ. ಸಾಕ್ಷ್ಯಾಧಾರಿತ ಅಭ್ಯಾಸಗಳು ಒಳ್ಳೆಯದು ಎಂಬ ಊಹೆ ಇದೆ ಮತ್ತು ಅದನ್ನು ಶಿಕ್ಷಕರು ತಮ್ಮ ಅಭ್ಯಾಸಗಳನ್ನು ಸಂಶೋಧನೆಯ ಮೂಲಕ ಸಾಧಿಸಬಹುದು ಎಂದು ಗೋಲ್ಡಾಕ್ರಿ ಸೂಚಿಸಿದರು. ವಾಸ್ತವಾಗಿ ಶಾಲೆಗಳಲ್ಲಿ ಸಂಶೋಧನಾ ಪದ್ಧತಿಯು ಇದೆ . ಶಾಲಾ ಸುಧಾರಣೆಗೆ ಈ ಕೊಡುಗೆಯನ್ನು ಅಂಗೀಕರಿಬಹುದು. ಒಬ್ಬ ಶಿಕ್ಷಕರಾಗಿ ನಿಮ್ಮ ತರಗತಿಯ ಅಧ್ಯಾಯನವನ್ನು ನೀವು ಕೈಗಿತ್ತಿಕೊಳ್ಳಬೇಕು, ಇದು ತುಲನಾತ್ಮಕವಾಗಿ ಸಣ್ಣ ಪ್ರಮಾಣದ ಮತ್ತು ಅಲ್ಪಾವಧಿಯದಾಗಿದ್ದು, ಕ್ರಿಯಾ ಸಂಶೋಧನೆಯು ವಿಧಾನ ಈ ಸಂದರ್ಭದಲ್ಲಿ ಉತ್ತಮವಾಗಿ ಕೆಲಸ ಮಾಡುವ ಸಾಧ್ಯತೆ ಇದೆ. ಕ್ರಿಯಾ ಸಂಶೋಧನೆ ಮಾಡುವ ಅಭ್ಯಾಸಿಗರು ಅದನ್ನು ವ್ಯವಸ್ಥಿತವಾಗಿ ಸುಧಾರಣಾ ದೃಷ್ಟಿಯಿಂದ ತನಿಖೆಯನ್ನು ಕೈಗೆತ್ತಿಕೊಳ್ಳುತ್ತಾರೆ. ಕ್ರಿಯಾ ಸಂಶೋಧನೆಯು ಈ ಕೆಳಗಿನ ಹಂತಗಳನ್ನು ಒಳಗೊಂಡಿವೆ.

- ತರಗತಿಯಲ್ಲಿ ಪರಿಹಾರ ಕಂಡುಕೊಳ್ಳಬೇಕಾದ ಸಮಸ್ಯೆಗಳನ್ನು ಪತ್ತೆಹಚ್ಚುವುದು.:– ಕೆಲವು ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಏಕೆ ಉತ್ತರಿಸುವುದಿಲ್ಲ ಅಥವಾ ನೀವು ಬೋಧಿಸುವ ವಿಷಯಗಳು ಕಠಿಣವಾಗಲು ಕಾರಣ ಅಥವಾ ಪ್ರೇರೇಪಣೆಯ ಕೊರತೆ, ಹೀಗೆ ಸಾಕಷ್ಟು ನಿರ್ದಿಷ್ಟವಾಗಿರಬೇಕು ಅಥವಾ ಸಾಮಾನ್ಯವಾಗಿಯೂ ಇರಬಹುದು. ಉದಾ. ಪರಿಣಾಮಕಾರಿಯಾದ ಗುಂಪು ಚಟುವಟಿಕೆಯನ್ನು ಹೇಗೆ ಆಯೋಜಿಸುವಿರಿ.
- ಸಂಶೋಧನೆ ಕೈಗೆತ್ತಿಕೊಳ್ಳಲು ಕಾರಣ ಮತ್ತು ಉದ್ದೇಶವನ್ನು ಸ್ಪಷ್ಟಪಡಿಸಿ:–ಇದು ವ್ಯಾಖ್ಯಾ ರೂಪದಲ್ಲಿರಲಿ. ಮತ್ತು ಈ ಸಮಸ್ಯೆಯ ಬಗ್ಗೆ ತಿಳಿದಿರುವ ಅಂಶಗಳು ಒಳಗೊಂಡಿರಲಿ.
- ಸಮಸ್ಯೆಯನ್ನು ನಿಭಾಯಿಸಲು ಯೋಜನೆಯನ್ನು ತಯಾರಿಸಿ.
- ಲಭ್ಯ ಮಾಹಿತಿಗಳನ್ನು ಸಂಗ್ರಹಿಸಿ ಮತ್ತು ವಿಶ್ಲೇಷಿಸಿ.
- ಮತ್ತೊಂದು ಯೋಜನೆಯನ್ನು ತಯಾರಿಸಿ:– ನೀವು ಗಮನಿಸಿದ ಅಂಶಗಳು ಮತ್ತು ನೀವು ಗುರುತ್ತಿಸಿದ ಅಂಶಗಳನ್ನು ಮತ್ತಷ್ಟು ಅರ್ಥೈಸಿಕೊಳ್ಳಲು ಬೇಕಾದ ಅಂಶಗಳ ಆಧಾರದಲ್ಲಿರಲಿ.

ಕ್ರಿಯಾ ಸಂಶೋಧನೆಯು ಆವೃತ್ತ ಪ್ರಕ್ರಿಯೆ.(ಚಿತ್ರ 3.1) . ಮಧ್ಯವರ್ತನೆಗಳು ಮತ್ತು ವಿಶ್ಲೇಷಣೆಗಳ ಪುನರಾವರ್ತನೆಯ ಮೂಲಕ ನಿಮಗೆ ಸಮಸ್ಯೆಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಅದರ ಬಗ್ಗೆ ಏನಾದರೂ ಮಾಡಬಹುದು ಎಂಬ ಆಶಾಭಾವವನ್ನು ಹೊಂದುವುದು. ಚಿತ್ರ 3.1 ನೀವು ಉತ್ತರಿಸಲು ಬಯಸುವ ಪ್ರಶ್ನೆಗಳು ಹಾಗೂ ನೀವು ಇಚ್ಚಿಸುವ ವಿಧಾನಗಳನ್ನು ಕ್ರಿಯಾ ಸಂಶೋಧನೆಯ ಆವೃತ್ತದಲ್ಲಿರುತ್ತದೆ. ನೀವು ಕೆಲವು ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಬೇಕು ಅವು ನಿಮ್ಮನ್ನು ಉತ್ತರಿಸಲು ಸಕ್ರಿಯಗೊಳಿಸುತ್ತದೆ. ಮಾಹಿತಿಗಳನ್ನು ಸಂಗ್ರಹಿಸಲು ಮೂರು ವಿಶಾಲ ಮಾರ್ಗಗಳಿವೆ. ಅವು

- ಕೆಲಸ ವೀಕ್ಷಣೆ
- ಪ್ರಶ್ನಿಸುವುದು(ಸಮೀಕ್ಷಾ ವಿಧಾನ ಅಥವಾ ಸಂವಾಹನ)
- ದಾಖಲೆಗಳ ವಿಶ್ಲೇಷಣೆ

ಚಿತ್ರ 3.2ರಲ್ಲಿ ವಿವಿಧ ಮಾಹಿತಿ ಸಂಗ್ರಹಣಾ ವಿಧಾನವನ್ನು ನೀಡುತ್ತಿದೆ. ಅವಲೋಕನದಲ್ಲಿ ನಿಮ್ಮ ಆತ್ಮವಿಶ್ವಾಸಕ್ಕಾಗಿ ನಿಮಗೆ ಅನೇಕ ಸಂಪನ್ಮೂಲಗಳಿಂದ ಸಾಕ್ಷಿಗಳ ಅಗತ್ಯವಿದೆ. ಪ್ರತಿ ವಿಧಾನದಲ್ಲಿ ಅನುಕೂಲಗಳು ಮತ್ತು ಮಿತಿಯನ್ನು ಹೊಂದಿದೆ. ನೀವು ಮಿತಿಯನ್ನು ಕಡಿಮೆ ಮಾಡಿಕೊಳ್ಳಿ ಹಾಗೂ ಅದನ್ನು ಖಚಿತ ಪಡಿಸಿಕೊಳ್ಳಿ. ನೀವು ಮಾಹಿತಿ ಸಂಗ್ರಹಣೆಯಲ್ಲಿ ಸಿಂಧುತ್ವ ಮತ್ತು ವಿಶ್ವಾಸಾರ್ಹತೆ ಎರಡನ್ನೂ ಪರಿಗಣಿಸುವ ಅಗತ್ಯವಿದೆ. ಕೆಲವನ್ನು ಮಾನ್ಯ

ಮಾಡಿದ್ದರೂ ಅದು ಸರಿ ಅಥವಾ ವಿಶ್ವಾಸಾರ್ಹವಾಗಿದೆಯೇ ಎಂಬುವುದನ್ನು ಖಚಿತಪಡಿಸಿಕೊಳ್ಳಿ. ಸಿಂಧುತ್ವವನ್ನು ಪರೀಕ್ಷಿಸಲು ಈ ಕೆಳಗಿನ ಪ್ರಶ್ನೆಗಳು ಸಹಕಾರಿಯಾಗಿವೆ:–

- ಫಲಿತಾಂಶವನ್ನು ಸಾಮಾನೀಕರಿಸಬಹುದೇ? ನಿಮ್ಮ ಸಂಶೋಧನೆಯನ್ನು ತಿಳಿದುಕೊಂಡ ಅಥವಾ ಓದಿದ ಯಾರಾದರೂ ಅವರ ಅನುಭವದ ಆಧಾರದಲ್ಲಿ ನಿಮ್ಮ ಸಂಶೋಧನೆಯು ಅಧಿಕೃತ ಮತ್ತು ಸಂವೇದನಾಶೀಲ ಎಂದು ನಿರ್ಧರಿಸುವರು.
- ಮಾಹಿತಿಯು ತೀರ್ಮಾನವನ್ನು ಬೆಂಬಲಿಸುತ್ತಿದೆಯೇ?

ಒಂದಕ್ಕಿಂತ ಹೆಚ್ಚು ದತ್ತಾಂಶಗಳು ಸಂಗ್ರಹ ಇದ್ದರೆ ಅಥವಾ ಹೊರಬಂದ ತೀರ್ಮಾನವನ್ನು ಭಾಗವಹಿಸಿದವರು ಪರಿಶೀಲಿದರೆ ಈ ಸಾಧ್ಯತೆ ಹೆಚ್ಚು.

- ಪ್ರಶ್ನಾವಳಿ ಅಥವಾ ಸಂದರ್ಶನಾ ಪ್ರಶ್ನೆಗಳು ಸಂಶೋಧನಾ ಪ್ರಶ್ನೆಗಳಿಗೆ ಸ್ಪಷ್ಟವಾದ ಸಂಬಂಧವಿದೆಯೇ?
  ವಿಶ್ವಾಸಾರ್ಹತೆ ಎಂಬುವುದು ಕಠಿಣ ಪರಿಕಲ್ಪನೆ ,ಇದನ್ನು ಪುನರಾವರ್ತನೆ ಮತ್ತು ಪುನರಾವರ್ತನೀಯತೆಯಿಂದ ಹೊಂದಬೇಕು. ವಿಶ್ವಾಸಾರ್ಹತೆಯು ನಿಜ ಜೀವನದ ನಿಷ್ಠೆ, ಪ್ರಾಮಾಣಿಕತೆ ಮತ್ತು ಪ್ರತಿಕ್ರಿಯೆಗೆ ಅರ್ಥಪೂರ್ಣತೆಯನ್ನು ಒಳಗೊಂಡಿದೆ. Cohen et al. (2003) ರವರ ಅಭಿಪ್ರಾಯದಂತೆ ನಂಬಿಕಾರ್ಹತೆ ಎಂಬುವುದು 'ವಿಶ್ವಾಸಾರ್ಹತೆ' ಎಂದು ಅರ್ಥೈಸಿಕೊಳ್ಳಲಾಗಿದೆ ಮತ್ತು ವಿಶ್ವಾಸಾರ್ಹಾತೆಯು ಸಾಕಷ್ಟು ಮಾಹಿತಿಗಲ ಸಂಗ್ರಹ, ಭಾಗವಹಿದವರೊಡನೆ ಸಾಕ್ಷಿಗಳ ಪರಿಶೀಲನೆ, ಅದೇ ವಿಚಾರಕ್ಕೆ ಮತ್ತಷ್ಟು ಸಾಕ್ಷಿಗಳನ್ನು ಒಂದಕ್ಕಿಂತ ಹೆಚ್ಚು ಮಾಹಿತಿ ಸಂಗ್ರಹದಿಂದ ಹುಡುಕುವುದರ ಮೇಲೆ ಅವಲಂಬಿಸಿದೆ. (ಕಲಿಸಲು ಕಲಿಕೆ ಯಿಂದ ಅಳವಡಿಸಿಕೊಳ್ಳಲಾಗಿದೆ. ತರಗತಿಯ ಪರಿಚಯದ ಒಂದು ಪರಿಚಯ)




ಚಿತ್ರ ಆರ್3.1 ಕ್ರಿಯಾ ಸಂಶೋಧನೆಯ ಆವೃತ್ತ.

ನೀವು ಉತ್ತರಿಸಲು ಬಯಸಿದ ಪ್ರಶ್ನೆಗಳನ್ನು ಮತ್ತು ನೀವು ಬಯಸುವ ವಿಧಾನಗಳನ್ನು ನಿರ್ಧರಿಸಿದ ನಂತರ ಪ್ರಶ್ನೆಗಳಿಗೆ ಉತ್ತರಿಸಲು ಕೆಲವು ಅಗತ್ಯ ಮಾಹಿತಿಗಳನ್ನು ನೀವು ಸಂಗ್ರಹಿಸುವ ಅಗತ್ಯವಿದೆ. ನೀವು ಮೂರು ವಿಶಾಲ ವಿಧಾನಗಳಿಂದ ಅಗತ್ಯ ಮಾಹಿತಿಗಳನ್ನು ಸಂಗ್ರಹಿಸಬಹುದು. ಅವು.

- ಕೆಲಸದಲ್ಲಿ ತೊಡಗಿರುವಾಗ ಜನರನ್ನು ವೀಕ್ಷಿಸುವುದು.
- ಪ್ರಶ್ನಿಸುವುದು (ಸಮೀಕ್ಷೆಮಾಡುವುದರಿಂದ ಅಥವಾ ಜನರನ್ನು ಮಾತನಾಡಿಸುವುದರ ಮೂಲಕ)
- ದಾಖಲೆಗಳನ್ನು ವಿಶ್ಲೇಸಿಸುವುದರಿಂದ.

ಚಿತ್ರ ಆರ್ 3.2 ವಿವಿಧ ಮಾಹಿತಿ ಸಂಗ್ರಹಣಾ ವಿಧಾನಗಳ ಸ್ಥೂಲನೋಟ ಒದಗಿಸುತ್ತದೆ.




ಆರ್ 3.2

ನಿಮ್ಮ ಸಂಶೋಧನೆಯ ಫಲದ ಆತ್ಮವಿಶ್ವಾಸದ ಸಲುವಾಗಿ ನಿಮಗೆ ಅನೇಕ ಮೂಲಗಳಿಂದ ಸಾಕ್ಷಿಗಳ ಅಗತ್ಯವಿದೆ. ಪ್ರತಿ ವಿಧಾನವೂ ಅನುಕೂಲಗಳು ಮತ್ತು ಮಿತಿಗಳನ್ನು ಹೊಂದಿರುತ್ತದೆ. ಮಿತಿಯನ್ನು ಕನಿಷ್ಠಗೊಳಿಸುವ ನಿಮ್ಮ ಕಾರ್ಯವನ್ನು ಖಚಿತಪಡಿಸುವ ಅಗತ್ಯವಿದೆ.

ನೀವು ಸಂಗ್ರಹಿಸಿದ ಮಾಹಿತಿಗಳ ಸಿಂಧುತ್ವವನ್ನು ಮತ್ತು ವಿಶ್ವಾಸಾರ್ಹತೆ ಎರಡನ್ನೂ ಪರಿಗಣಿಸುವ ಅಗತ್ಯವಿದೆ. ಕೆಲವು ನ್ಯಾಯಸಮ್ಮತವಾಗಿದ್ದರೆ, ಅದು ಸರಿಯೇ ಅಥವಾ ನಂಬಿಕಾರ್ಹವಾಗಿದೆಯೇ ಎಂಬುವುದನ್ನು ಸೂಚಿಸುತ್ತದೆ. ಸಿಂಧುತ್ವವನ್ನು ಪರೀಕ್ಷಿಸಲು ಈ ಕೆಳಗಿನ ಪ್ರಶ್ನೆಗಳನ್ನು ಕೇಳುವುದು ಉಪಯುಕ್ತ.

- ಫಲಿತಾಂಶವನ್ನು ಸಾಮಾನೀಕರಿಸಬಹುದೇ? ನಿಮ್ಮ ಸಂಶೋಧನೆಯನ್ನು ಆಲಿಸಿದ ಅಥವಾ ಓದಿದ ಯಾರಾದರೂ ಅವರ ಅನುಭವದ ಆಧಾರದಲ್ಲಿ ನಿಮ್ಮ ಸಂಶೋಧನೆಯು ಅಧಿಕೃತ ಮತ್ತು ಸಂವೇದನಾಶೀಲ ಎಂದು ನಿರ್ಧರಿಸಬಹುದು.
- ಮಾಹಿತಿಯು ತೀರ್ಮಾನವನ್ನು ಬೆಂಬಲಿಸುತ್ತಿದೆಯೇ?
  ಏಕ ಕಾಲದಲ್ಲಿ ಒಂದಕ್ಕಿಂತ ಹೆಚ್ಚು ದತ್ತಾಂಶಗಳ ಸಂಗ್ರಹ ಇದ್ದಲ್ಲಿ ಅಥವಾ ಸಂಶೋಧನೆಯಲ್ಲಿ ಭಾಗವಹಿಸಿದವರು ಪರಿಶೀಲಿದರೆ ಈ ಸಾಧ್ಯತೆಗಳು ಹೆಚ್ಚು.
- ತಯಾರಿಸಿಕೊಂಡ ಪ್ರಶ್ನಾವಳಿ ಅಥವಾ ಸಂದರ್ಶನಾ ಪ್ರಶ್ನೆಗಳು, ಸಂಶೋಧನಾ ಪ್ರಶ್ನೆಗಳಿಗೆ ನಿಕಟವಾದ ಸಂಬಂಧವಿದೆಯೇ?

ವಿಶ್ವಾಸಾರ್ಹತೆ ಎಂಬುವುದು ಕಠಿಣ ಪರಿಕಲ್ಪನೆ ,ಇದು ಪುನರಾವರ್ತನೆ ಮತ್ತು ಯಥಾ ಚಿತ್ರಣವನ್ನು ಹೊಂದಿರಬೇಕು. ವಿಶ್ವಾಸಾರ್ಹತೆಯು, ನಿಜ ಜೀವನದ ನಿಷ್ಠೆ, ಪ್ರಾಮಾಣಿಕತೆ ಮತ್ತು ಪ್ರತಿಕ್ರಿಯೆಗೆ ಅರ್ಥಪೂರ್ಣತೆಯನ್ನು ಒಳಗೊಂಡಿದೆ. Cohen et al. (2003) ರವರ ಅಭಿಪ್ರಾಯದಂತೆ ನಂಬಿಕಾರ್ಹತೆ ಎಂಬುವುದು 'ವಿಶ್ವಾಸಾರ್ಹತೆ' ಎಂದು ಅರ್ಥೈಸಿಕೊಳ್ಳಲಾಗಿದೆ ಮತ್ತು ವಿಶ್ವಾಸಾರ್ಹತೆಯು ಸಾಕಷ್ಟು ಮಾಹಿತಿಗಳ ಸಂಗ್ರಹ, ಭಾಗವಹಿದವರೊಡನೆ ಸಾಕ್ಷಿಗಳ ಪರಿಶೀಲನೆ, ಅದೇ ವಿಚಾರಕ್ಕೆ ಮತ್ತಷ್ಟು ಸಾಕ್ಷಿಗಳನ್ನು ಒಂದಕ್ಕಿಂತ ಹೆಚ್ಚು ಮಾಹಿತಿ ಸಂಗ್ರಹದಿಂದ ಹುಡುಕುವುದರ ಮೇಲೆ ಅವಲಂಬಿಸಿದೆ. (*Learning to teach: an introduction to classroom research* ನಿಂದ ಅಳವಡಿಸಲಾಗಿದೆ)

## ಸಂಪನ್ಮೂಲ 4: ಕ್ರಿಯಾ ಸಂಶೋಧನೆಗೆ ಟೆಂಪ್ಲೇಟ್

| ಶಿಕ್ಷಕರ ಹೆಸರು. | | | |
|---|---|---|---|
| ದಿನಾಂಕ | | | |
| ಗುರುತ್ತಿಸಿದ ಅಗತ್ಯಗಳು/ಬಳಸಿಕೊಂಡ ಕೌಶಲ್ಯಗಳು | ಅಗತ್ಯಗಳನ್ನು ಪುರೈಸಿಕೊಂಡ ಬಗೆ | ಭಾಗೀದಾರರು ಯಾರು? | ಯಾವಾಗ |
| | | | |

| | | | |
|---|---|---|---|
| | | | |
| ಇನೇನ್ನಾದರು ಇದ್ದಲ್ಲಿ | | | |
| ಶಾಲಾ ನಾಯಕನ ಸಹಿ | | | |

# ಪೂರಕ ಸಂಪನ್ಮೂಲಗಳು

- '10 professional development ideas for teachers': http://www.theguardian.com/teacher-network/teacher-blog/2013/oct/22/teacher-professional-development-school-advice
- *Learning to teach: an introduction to classroom research*, an Open University OpenLearn unit: http://www.open.edu/openlearn/education/learning-teach-introduction-classroom-research/content-section-0
- 'How principles can grow teacher excellence' by Mariko Norobi: http://www.edutopia.org/stw-school-turnaround-principal-teacher-development-tips
- 'What is teacher development?' by Linda Evans: http://www.education.leeds.ac.uk/assets/files/staff/papers/What-is-teacher-Development.pdf
- 'Theories on and concepts of professionalism of teachers and their consequences for the curriculum in teacher education' by Marco Snoek:http://kennisbank.hva.nl/document/477245

# ಪರಾಮರ್ಶನ/ ಗ್ರಂಥಸೂಚಿ


Ball, A.F. (2009) 'Toward a theory of generative change in culturally and linguistically complex classrooms', *American Educational Research Journal*, vol. 46, no. 1, pp. 45–72.

Borko, H. (2004) 'Professional development and teacher learning: mapping the terrain', *Educational Researcher*, vol. 33, no. 8. Available from: http://www.aera.net/uploadedFiles/Journals_and_Publications/Journals/Educational_Researcher/Volume_33_No_8/02_ERv33n8_Borko.pdf (accessed 30 July 2014).

Cohen, L., Manion, L. and Morrision, K. (2000) *Research Methods in Education*. London: RoutledgeFalmer.

Day, C. (1993) 'reflection: a necessary but not sufficient condition for professional development',*British Educational Research Journal*, vol. 19, no. 1, pp. 83–93.

Eraut, M. (2004) 'Informal learning in the workplace', *Studies in Continuing Education*, vol. 26, no. 2, pp. 247–73.

Goldacre, B. (2013) 'Building evidence into education' (online), March. Available from: http://dera.ioe.ac.uk/17530/1/ben%20goldacre%20paper.pdf (accessed 20 November 2014).

Haigh, N. (2005) 'Everyday conversation as a context for professional learning and development', *International Journal for Academic Development*, vol. 10, no. 1.

Hudson, P., Usak, M. and Savran-Gencer, A. (2013) 'Employing the five-factor mentoring instrument: analysing mentoring practices for teaching primary science', *European Journal of Teacher Education*, vol. 32, no. 1, pp. 63–74.

*Learning to teach: an introduction to classroom research*, Open University OpenLearn unit. Available from: http://www.open.edu/openlearn/education/learning-teach-introduction-classroom-research/content-section-0 (accessed 22 October 2014).

National Council of Educational Research and Training (2005) *National Curriculum Framework*, National Council of Educational Research and Training. Available from: http://www.ncert.nic.in/rightside/links/pdf/framework/english/nf2005.pdf (accessed 25 September 2014).

National University of Educational Planning and Administration (2014) *National Programme Design and Curriculum Framework*. New Delhi: NUEPA. Available from: https://xa.yimg.com/kq/groups/15368656/276075002/name/SLDP_Framework_Text_NCSL_NUEPA.pdf (accessed 14 October 2014).

Ulvik, M. and Sunde, E. (2013) 'The impact of mentor education: does mentor education matter?',*Professional Development in Education*, vol. 39, no. 5, pp. 754–70.

Zwarta, R.C., Wubbelsb, T., Bergena, T.C.M. and Bolhuisc, S. (2007) 'Experienced teacher learning within the context of reciprocal peer coaching', *Teachers and Teaching: Theory and Practice*, vol. 13, no. 2, pp. 165–87. Available from: http://expertisecentrumlerenvandocenten.nl/files/TTTP_collegiale_coaching_0.pdf (accessed 2 August 2014).

# ಕೃತಜ್ಞತೆಗಳು

This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.